ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 12 ಸಂ. 9 ಸೆಪ್ಟೆಂಬರ್ 2015 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಫೆಬ್ರವರಿ 2012ರ ಸಂಚಿಕೆ)

ಇಚ್ಛಾಶಕ್ತಿಯನ್ನು ನಮಗೆ ವರಪ್ರಸಾದವಾಗಿ ಕೊಡಲಾಗಿದೆ ಎಂದು ನನ್ನ ಗುರುಗಳಾದ ಮಹರ್ಷಿ ಅಮರರವರು ಹೇಳಿದ್ದಾರೆ. ನಮಗೆ ಏನನ್ನಾದರೂ ಆಯ್ಕೆ ಮಾಡುವ ಸ್ವಾತಂತ್ರ್ಯವಿದೆ; ಕೆಟ್ಟದ್ದನ್ನೂ ಕೂಡ. ಸ್ವತಂತ್ರತೆಯಲ್ಲಿ ನಾವು ಬೆಳೆಯುತ್ತೇವೆ ಎಂದು ಅವರು ಹೇಳಿದರು. ಕೆಲವೊಮ್ಮೆ ನಾವು ಕೆಟ್ಟದ್ದನ್ನು ಆಯ್ಕೆ ಮಾಡಬಹುದು, ತಪ್ಪು ಮಾಡಿ ಸೋಲಬಹುದು. ಆದರೆ ನಾವು ಅದರಿಂದ ಕಲಿತು ಬದಲಾಗುತ್ತೇವೆ. ಅತಿ ಮುಖ್ಯವಾದ ಈ ಸತ್ಯವನ್ನು ನಾವು ಅರ್ಥಮಾಡಿಕೊಳ್ಳಬೇಕು.

ಸ್ವತಂತ್ರತೆಯಲ್ಲಿ ನಾನು ನಂಬಿಕೆ ಇರಿಸಿದ್ದೇನೆ. ಜ್ಞಾನೋದಯ ಹೊಂದಿದ ಎಲ್ಲರೂ ಇದನ್ನು ನಂಬುತ್ತಾರೆ. ಸ್ವತಂತ್ರತೆಯು ನಾಗರಿಕತೆಯ ಕುರುಹು; ಆಧ್ಯಾತ್ಮಿಕತೆಯ ಕುರುಹು. ಇತರರು ತಮ್ಮನ್ನು ಮುಕ್ತವಾಗಿ ಅಭಿವ್ಯಕ್ತಿಸಲು, ಅವರದೇ ಆದ ರೀತಿಯಲ್ಲಿ ಬದುಕಲು ಹಾಗೂ ನೂತನ ವಿಧವಾಗಿ ಯೋಚಿಸಲು ಮತ್ತು ಬೆಳೆಯಲು, ನಾವು ಅನುವು ಮಾಡಿಕೊಡಬೇಕು. ಸುಸಂಸ್ಕೃತರು ಇತರರ ಸ್ವಾತಂತ್ರ್ಯಕ್ಕೆ ಧಕ್ಕೆ ಬರದಂತೆ ತಮ್ಮ ಸ್ವಾತಂತ್ರ್ಯವನ್ನು ಪ್ರಯೋಗಿಸುತ್ತಾರೆ. ಅವರು ಇತರರಿಗೆ ನೋವುಂಟುಮಾಡುವುದಿಲ್ಲ, ಇತರರ ಭಾವನೆಗಳಿಗೆ, ನಂಬಿಕೆಗೆ ಧಕ್ಕೆ ತರುವುದಿಲ್ಲ.

ನಾವು ನಮ್ಮ ಸ್ವಾತಂತ್ರ್ಯವನ್ನು ಜವಾಬ್ದಾರಿಯುತವಾಗಿ ಬಳಸಿದಾಗ, ನಾವು ಕೆಲವೊಂದು ಅಲಿಖಿತ ನಿಯಮಗಳಿಗೆ ಹಾಗೂ ನಿಬಂಧನೆಗಳಿಗೆ ಒಳಪಟ್ಟಿದ್ದೇವೆ ಎಂಬುದನ್ನು ಅರಿತುಕೊಳ್ಳುತ್ತೇವೆ. ದುಡುಕುತನದ ಸ್ವಾತಂತ್ರ್ಯ ಅಸಾಧ್ಯ ಎಂಬುದನ್ನು ಅರ್ಥಮಾಡಿಕೊಳ್ಳುತ್ತೇವೆ. ನಾವು ಸಂಪೂರ್ಣವಾಗಿ ಸ್ವತಂತ್ರರಲ್ಲ ಎಂಬುದನ್ನು ಅರಿತುಕೊಳ್ಳುತ್ತೇವೆ. ಇತರರ ಸ್ವಾತಂತ್ರ್ಯ ಮತ್ತು ಭಾವನೆಗಳನ್ನು ನಾವು ಗೌರವಿಸಬೇಕು. ವಿಶ್ವನಿಯಮಗಳನ್ನು ಗೌರವಿಸಬೇಕು. ಸ್ವತಂತ್ರತೆಯೊಂದಿಗೆ ಜವಾಬ್ದಾರಿಯೂ ತಳುಕು ಹಾಕಿಕೊಂಡಿರುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಜವಾಬ್ದಾರಿಯುತ ಸ್ವಾತಂತ್ರ್ಯವು ನಾಗರಿಕತೆಯ ಔನ್ನತ್ಯವನ್ನು ಸೂಚಿಸುತ್ತದೆ.

ಒಂದು ಪುಸ್ತಕವನ್ನು ಬಹಿಷ್ಕರಿಸಿದಾಗ, ಒಂದು ಚಲನಚಿತ್ರವನ್ನು ರದ್ದು ಪಡಿಸಿದಾಗ(censored), ಜನರು ಒಂದು ವಿಚಾರದ ಬಗ್ಗೆ, ಒಂದು ಅಭಿವ್ಯಕ್ತಿಯ ಬಗ್ಗೆ ರೋಷಾವೇಶದಿಂದ ವಿರೋಧ ವ್ಯಕ್ತಪಡಿಸಿದಾಗ, ಅದರಲ್ಲೂ ಪ್ರಜಾಪ್ರಭುತ್ವದಲ್ಲಿ ಹೀಗಾದಾಗ ನನಗೆ ದುಃಖವಾಗುತ್ತದೆ. ಒಂದು ಪುಸ್ತಕ, ಚಲನಚಿತ್ರ ಅಥವಾ ಅಭಿವ್ಯಕ್ತಿಯು ಜುಗುಪ್ಸೆ ಹುಟ್ಟಿಸುವಂಥಾದ್ದಾದರೆ ಜನರೇ ಅದನ್ನು ತಿರಸ್ಕರಿಸುತ್ತಾರೆ. ಇಲ್ಲಿ ಸರಕಾರಗಳು ತಲೆಹಾಕಬೇಕಾಗಿಲ್ಲ. ಸರಕಾರಗಳು ತಲೆಹಾಕಿದವೆಂದರೆ ಅದರ ಹಿಂದೆ ರಾಜಕೀಯದ ಕಾರಣವಿರುತ್ತದೆ. ಸಮಾಜಕ್ಕೆ ಕೆಡುಕುಂಟುಮಾಡುವುದನ್ನು ತಿರಸ್ಕರಿಸುವಷ್ಟು ಬುದ್ಧಿಮತ್ತೆ ಜನರಲ್ಲಿದೆ ಎಂಬುದನ್ನು ಸರಕಾರಗಳು ಮರೆಯಬಾರದು. ಆದರೆ ಯಾವಾಗಲೂ ಈ ತತ್ವದ ಉಲ್ಲಂಘನೆಯಾಗುವುದನ್ನು ನಾವು ಕಾಣುತ್ತೇವೆ.

ನನಗೆ ನಾಗರಿಕತೆಗೂ ಅಧ್ಯಾತ್ಮಕ್ಕೂ ಯಾವ ವ್ಯತ್ಯಾಸವೂ ಕಾಣುವುದಿಲ್ಲ. ತಾಳ್ಮೆ, ಶಾಂತಿಯುತ ಭಿನ್ನಾಭಿಪ್ರಾಯ ಹಾಗೂ ಪ್ರತಿಭಟನೆ ಮತ್ತು ಇತರರ ಸ್ವತಂತ್ರತೆಯನ್ನು ಗೌರವಿಸುವುದು, ಪ್ರೌಢ ಪ್ರಜಾಪ್ರಭುತ್ವದ ಸಂಕೇತ. ಅದೇ ಅಧ್ಯಾತ್ಮಿಕತೆ. ಹೊಸಯುಗದತ್ತ ನಮ್ಮ ಸಮಯ ಸಾಗುತ್ತಿದ್ದಂತೆ ಹೊಸ ನಾಗರಿಕತೆಯೊಂದು ಅಭಿವೃದ್ಧಿಗೆ ಬರುತ್ತದೆ. ಆಗಲೇ ಅಲ್ಲಲ್ಲಿ ಜ್ಞಾನೋದಯ ಉಂಟಾಗುತ್ತಿದೆ. ಇದು ನನಗೆ ಉನ್ನತ ಸ್ತರದಿಂದ ಕಂಡುಬರುತ್ತದೆ. ನನ್ನ ಆಶಾಭಾವವು ಕೇವಲ ಶ್ರದ್ಧಾಭಕ್ತಿಯ ಹಾರೈಕೆಯಲ್ಲ. ಅದು ಭವಿಷ್ಯತ್ತಿನ ನೋಟವನ್ನು ಆಧರಿಸಿದುದು.

ಪ್ರಜ್ಞೆಯಲ್ಲಿ ತುಮುಲ ಹಾಗೂ ತಳಮಳಗಳೇಳುವಂತಹ ಕಾಲಘಟ್ಟದಲ್ಲಿ ನಾವಿದ್ದೇವೆ. ನಾವು ಮಹಾ ಪರಿವರ್ತನೆಗಳ ಪ್ರಕ್ರಿಯೆಯಲ್ಲಿದ್ದೇವೆ. ಆ ಪ್ರಕ್ರಿಯೆಗಳು ಯಾತನೆಯನ್ನುಂಟುಮಾಡುತ್ತವೆ ಎಂದು ನನಗೆ ತಿಳಿದಿದೆ. ಇಂತಹ ಸಮಯಗಳಲ್ಲಿ ಗೊಂದಲ ಹಾಗೂ ಹತಾಶೆ ಸ್ವಾಭಾವಿಕ. ಆದರೆ ನಾವು ಭರವಸೆ ಕಳೆದುಕೊಳ್ಳಬಾರದು. ಅಧಿಕಾರದಲ್ಲಿರುವವರು ಪರಿವರ್ತನೆಗಳನ್ನು ತರುತ್ತಾರೆ ಎಂದು ನಾವು ನಿರೀಕ್ಷಿಸಬಾರದು. ಅವರಿಗೆ ದೂರದೃಷ್ಟಿ ಇಲ್ಲ, ಅವರಿಗೆ ತಮ್ಮದೇ ಆದ ಯೋಜನೆಗಳಿರುತ್ತವೆ. ಅವರಿಗಾಗಿ ಕಣ್ಣೀರಿಡುವ ಬದಲು ನಾವು ನಮ್ಮ ವ್ಯಕ್ತಿಗತ ಬೆಳವಣಿಗೆಯತ್ತ ಗಮನ ಹರಿಸಬೇಕು. ನಾವು ಉನ್ನತ ನಾಗರಿಕತೆಯನ್ನು ಬೆಳೆಸಬೇಕು. ಅಧ್ಯಾತ್ಮದತ್ತ ಹೆಚ್ಚಿನ ಒಲವು ತೋರಬೇಕು. ಪರಿವರ್ತನೆ ತರಲು ನಾವು ಧ್ಯಾನ ಮತ್ತು ಪರಿಶುದ್ಧ ಸಂಕಲ್ಪಗಳಿಂದ ಚೈತನ್ಯಗಳನ್ನು ವೃದ್ಧಿಗೊಳಿಸಬೇಕು. ನಾವು ಸೃಷ್ಟಿಕರ್ತರು. ನಾವೇ ಭವಿಷ್ಯತ್ತು.

ಮಹರ್ಷಿ ಅಮರರವರು ಅಧ್ಯಾತ್ಮದ ಬೇರೆಲ್ಲ ಸಾಧನೆಗಳ ನಡುವೆ ಮಹಾನ್ ಕಾಲಯಾತ್ರಿ (time traveller)ಯೂ ಆಗಿದ್ದರು. ಕಲಿಯುಗ ಮುಗಿದಿದೆ ಹಾಗೂ ನಾವು ನವಯುಗದ ಸಂಕ್ರಮಣದ ಪ್ರಕ್ರಿಯೆಗಳ ನಡುವೆ ಇದ್ದೇವೆ ಎಂದು ನಮಗೆ ಅವರು ಹೇಳಿದ್ದರು. ಅದೀಗ ಬಹಳ ದೂರವಿಲ್ಲ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಸಾಂಗ್ಲಿಯಲ್ಲಿನ, ಸಾಂಗ್ಲಿ ಅರ್ಬನ್ ಕೋಆಪರಟಿವ್ ಬ್ಯಾಂಕ್‌ನ ಉದ್ಯೋಗಿಗಳು ಬೆಳಕನ್ನು ಚಾನಲ್ ಮಾಡುತ್ತಿರುವುದು.

### ಸುದ್ದಿ-ಸೂಚನೆ

- ತಪೋನಗರದಲ್ಲಿ 31-7-2015 ರಂದು ಗುರುಪೂರ್ಣಿಮೆಯನ್ನು ಆಚರಿಸಲಾಯಿತು. ಧ್ಯಾನಿಗಳು ಮೆಡಿಟೇಶನ್ ಹಾಲ್‌ನಲ್ಲಿ ಸೇರಿ, ಪರಬ್ರಹ್ಮನ ಚೈತನ್ಯಗಳನ್ನು ಇಡೀ ಪ್ರಪಂಚಕ್ಕೆ ಚಾನಲ್ ಮಾಡಿದರು.
- ನಮ್ಮ ರೆಗ್ಯುಲರ್ ವಿದ್ಯಾರ್ಥಿಗಳು ಪ್ರತಿ ತಿಂಗಳು 10ನೇ ತಾರೀಖಿನೊಳಗೆ ತಮ್ಮ ಫೀಯನ್ನು ನೀಡಬೇಕಾಗಿ ಕೇಳಿಕೊಳ್ಳುತ್ತೇವೆ. ದೂರಕಲಿಕೆಯ ವಿದ್ಯಾರ್ಥಿಗಳು ಮಾನಸ ಕಚೇರಿಯಿಂದ ನೋಂದಣಿ ನವೀಕರಣದ ಪತ್ರ ದೊರಕಿದ ಕೂಡಲೇ ತಮ್ಮ ರಿಜಿಸ್ಟ್ರೇಶನ್ ಅನ್ನು ನವೀಕರಿಸಬೇಕಾಗಿ ವಿನಂತಿ.

### ಶ್ರೀ ಕೃಷ್ಣಜನ್ಮಾಷ್ಟಮಿ ವಿಶೇಷ ಧ್ಯಾನದ ತಂತ್ರ

ಒಂದು ದೊಡ್ಡ ನೀಲಿಬಣ್ಣದ ಗೋಳ ಅಥವಾ ಭಗವಾನ್ ಶ್ರೀಕೃಷ್ಣನ ಆಕಾರ, ಇವೆರಡರಲ್ಲಿ ಯಾವುದಾದರೊಂದನ್ನು ಊಹಿಸಿಕೊಳ್ಳಿ. ನೀವು ಒಂದು ಬೆಳಕಿನ ಕಿರಣವಾಗಿ ಈ ಗೋಳವನ್ನು ಅಥವಾ ಆಕಾರವನ್ನು ಪ್ರವೇಶಿಸಿ. ಈಗ ನೀವು ಶ್ರೀಕೃಷ್ಣನೊಳಗೆ ಇದ್ದೀರಿ. ಅವನನ್ನು ಅನುಭವಿಸಿ. ಈ ತಂತ್ರವನ್ನು ಒಂದು ದಿನದಲ್ಲಿ ಎಷ್ಟು ಬಾರಿಯಾದರೂ, ಎಷ್ಟು ಸಮಯದವರೆಗೆ ಬೇಕಾದರೂ ಅಭ್ಯಾಸ ಮಾಡಬಹುದು.ಈ ತಂತ್ರವನ್ನು ಹತ್ತುದಿನಗಳವರೆಗೆ ದಿನನಿತ್ಯದ ಧ್ಯಾನದ ಬದಲಿಗೆ ಅಭ್ಯಾಸ ಮಾಡಬಹುದು.

ದಿನಾಂಕ 13-09-2015 ರಂದು ಬೆಳಿಗ್ಗೆ 10.11ರಿಂದ ಮಧ್ಯಾಹ್ನ 02.36ರವರೆಗೆ ಸೂರ್ಯಗ್ರಹಣ ಮತ್ತು ದಿನಾಂಕ 28-09-2015 ರಂದು ಬೆಳಗಿನ ಜಾವ 05.41ರಿಂದ ಮಧ್ಯಾಹ್ನ 10.52 ರವರೆಗೆ ಚಂದ್ರಗ್ರಹಣವಿರುತ್ತದೆ. ದಯವಿಟ್ಟು ಈ ಗ್ರಹಣಗಳ ಸಂಪೂರ್ಣ ಅವಧಿಯಲ್ಲಿ ಇಡೀ ವಿಶ್ವಕ್ಕೆ ಲೈಟ್ ಚಾನಲ್ ಮಾಡಿ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 05 | ಶನಿ | ಶ್ರೀ ಕೃಷ್ಣ ಜನ್ಮಾಷ್ಟಮಿ |
| 06 | ಭಾನು | ಕೃಷ್ಣ ಅಷ್ಟಮಿ |
| 11 | ಶುಕ್ರ | ಮಾಸ ಶಿವರಾತ್ರಿ |
| 13 | ಭಾನು | ಅಮಾವಾಸ್ಯೆ<br>ಸೂರ್ಯಗ್ರಹಣ:<br>ಬೆಳಿಗ್ಗೆ 10.11 – ಮಧ್ಯಾಹ್ನ 02.36 |
| 16 | ಬುಧ | ಗೌರಿ ಪೂಜೆ |
| 17 | ಗುರು | ಗಣೇಶ ಪೂಜೆ |
| 21 | ಸೋಮ | ಶುಕ್ಲ ಅಷ್ಟಮಿ |
| 23 | ಬುಧ | ಶುಕ್ಲ ದಶಮಿ |
| 27 | ಭಾನು | ಅನಂತ ಪದ್ಮನಾಭ ವ್ರತ |
| 28 | ಸೋಮ | ಪೂರ್ಣಿಮೆ<br>ಚಂದ್ರಗ್ರಹಣ:<br>ಬೆಳಗಿನ ಜಾವ<br>05.41 ರಿಂದ ಮಧ್ಯಾಹ್ನ 10.52 |

### ಈ ತಿಂಗಳು ತಪೋನಗರದಲ್ಲಿ

ಭಾನುವಾರಗಳು:ಉಪನ್ಯಾಸಗಳು: ಬೆಳಿಗ್ಗೆ 11-12
ಲೈಟ್ ಚಾನಲಿಂಗ್: ಮಧ್ಯಾಹ್ನ12-1
13-09-15 ಸೂರ್ಯಗ್ರಹಣ ಧ್ಯಾನ:
ಬೆಳಿಗ್ಗೆ 10.11 ರಿಂದ ಮಧ್ಯಾಹ್ನ 02.36
ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ
20-09-15 ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಸಂಪರ್ಕಿಸಬಹುದು.

ಭಾನುವಾರದ ಉಪನ್ಯಾಸಗಳ DVDಗಳು ಸದಸ್ಯರುಗಳಿಗೆ ಲಭ್ಯವಿವೆ. ವಿವರಗಳಿಗಾಗಿ ಮಾನಸ ಆಫೀಸನ್ನು ದಯವಿಟ್ಟು ಸಂಪರ್ಕಿಸಿ.

## ಲೈಟ್ ಚಾನಲಿಂಗ್ ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ವರ್ಷಾ ದೀಪಕ್**

ಮೇ 2013ರಲ್ಲಿ ಕೆಲಸದ ಸಂದರ್ಶನಕ್ಕೆ ಹೋಗುವ ಮುಂಚೆ, ನನಗೆ ಸಹಾಯ ಮಾಡುವಂತೆ ಬೆಳಕನ್ನು ಪ್ರಾರ್ಥಿಸಿದೆ. ಆ ಸಂದರ್ಶನವು ನನಗೆ ಸಂತೃಪ್ತಿಯನ್ನು ನೀಡಲಿಲ್ಲವಾದರೂ ನನಗೆ ಕೆಲಸ ದೊರಕಿತು. ಕೃಷಿ ಮತ್ತು ವಾಣಿಜ್ಯ ಅಧಿಕಾರಿಯಾಗಿ ಹಳ್ಳಿಗಾಡಿನಲ್ಲಿ ಕೆಲಸ ಮಾಡುವುದು ಒಂದು ದೊಡ್ಡ ಸವಾಲಾಗಿತ್ತು. ಆರಂಭದಲ್ಲಿ, ನಾನು ಹೆಚ್ಚಿನ ಕಿರುಕುಳವನ್ನು ಎದುರಿಸಬೇಕಾಯಿತು. ದಿನನಿತ್ಯದ ನನ್ನ ಕೆಲಸದಲ್ಲಿ ನನಗೆದುರಾಗುತ್ತಿದ್ದ ಸವಾಲುಗಳನ್ನು ಧೈರ್ಯದಿಂದ ಎದುರಿಸಲು ಲೈಟ್ ಚಾನಲಿಂಗ್ ನನಗೆ ಧೈರ್ಯ ನೀಡಿತು. ಅದು ಸುತ್ತಮುತ್ತಲಿನ ನಕಾರಾತ್ಮಕತೆಗಳನ್ನು ನಿವಾರಿಸಿತು. ಕಷ್ಟಕರವಾದ ಸನ್ನಿವೇಶಗಳನ್ನು ಶಾಂತಿಯುತವಾಗಿ ನಿಭಾಯಿಸಲು ನನಗೆ ಸಾಧ್ಯವಾಯಿತು. ಧ್ಯಾನಕ್ಕೆ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಸಹಕಾರಿಯಾಗುವ ಒಂದು ಸಕಾರಾತ್ಮಕ ವಾತಾವರಣದಲ್ಲಿ ವಾಸಮಾಡಲು ನನಗೆ ಸಾಧ್ಯವಾಗಿದೆ. ಬೆಳಕು ಯಾವಾಗಲೂ ನನ್ನ ಮೇಲೊಂದು ಕಣ್ಣಿಟ್ಟು ನನ್ನನ್ನು ರಕ್ಷಿಸಿದೆ. ನನ್ನೆಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಮತ್ತು ಎಲ್ಲಾ ಸಮಸ್ಯೆಗಳಿಗೆ ಪರಿಹಾರಗಳನ್ನು ಅದು ಹೊಂದಿದೆ.

– ಅವಿನಾಶ್ ಕುಮಾರ್, ಲೈಟ್ ಚಾನಲ್

ಲೈಟ್ ಚಾನಲ್ ಮಾಡಿದ ನಂತರ ನನ್ನ ಮನಸ್ಸು ನಿರ್ಮಲಗೊಂಡಿದೆ ಮತ್ತು ನನಗೆ ನಿಜವಾಗಿಯೂ ಶಾಂತತೆಯ ಅನುಭವವಾಗಿದೆ. ಲೈಟ್ ಚಾನಲ್ ಮಾಡುವಾಗ ಬೆಳಕು ನನ್ನ ದೇಹದ ಮೂಲಕ ಹರಿದು, ನನಗೆ ಉತ್ತಮ ಆರೋಗ್ಯದ ಅನುಭವವಾಯಿತು. ಈ ಅದ್ಭುತ ತಂತ್ರವನ್ನು ಕಲಿಸಿಕೊಟ್ಟಿದ್ದಕ್ಕಾಗಿ ನಿಮಗೆ ಧನ್ಯವಾದಗಳು.

– ರಕ್ಷಿತ್ ಆರ್., 10ನೇ ತರಗತಿ, ಕ್ರೈಸ್ಟ್ ಶಾಲೆ, ಕಗ್ಗಲೀಪುರ, ಬೆಂಗಳೂರು.

ನಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಹೇಳಿಕೊಟ್ಟ ದಿನದಿಂದಲೇ, ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ನಾನು ಅದನ್ನು ಅಭ್ಯಾಸ ಮಾಡುತ್ತಿದ್ದೇನೆ. ನಾನು ಈ ತಂತ್ರವನ್ನು ಬಹಳ ಇಷ್ಟಪಡುತ್ತೇನೆ. ಇದನ್ನು ಅಭ್ಯಾಸ ಮಾಡುವುದರಿಂದ ನನ್ನ ಶಾಲಾಭ್ಯಾಸಗಳು ಉತ್ತಮಗೊಂಡಿದೆ. ನಾನು ಸಂತೋಷದಿಂದಿರಲು ಸಾಧ್ಯವಾಗಿದೆ.

– ಸುರೇಶ್ ಕೆ., 7ನೇ ತರಗತಿ, ಚೆನ್ನೈ ಮಾಧ್ಯಮಿಕ ಶಾಲೆ, ಟ್ರಸ್ಟ್‌ಪುರಂ, ಚೆನ್ನೈ

ಒಂದು ದಿನ, ನಾನು ಅತ್ಯಂತ ದುಃಖಿತಳಾಗಿದ್ದೆ. ಲೈಟ್ ಚಾನಲಿಂಗ್ ಮಾಡಿದ ನಂತರ ನನ್ನೆಲ್ಲಾ ದುಃಖ ನಿವಾರಣೆಯಾಗಿ ನನಗೆ ಹಿತವಾದ ಅನುಭವವಾಯಿತು.

– ಶ್ರೀಮತಿ ಲಕ್ಷ್ಮಿ, ಶಿಕ್ಷಕಿ, ಕಿಂಗ್ಸ್ ಪ್ರೌಢ ಶಾಲೆ, ಬೆಂಗಳೂರು

ಜಗ್‌ತಪ್‌ನ ತರಗತಿಗಳಲ್ಲಿ ನಡೆಸಿದ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ನಾನು ಹಿಂದೆ ಯಾವ ಸೆಷನ್‌ಗಳಲ್ಲೂ ಅನುಭವಿಸಿರದಷ್ಟು ಹೆಚ್ಚಿನ ಚೈತನ್ಯಗಳನ್ನು ಅನುಭವಿಸಿದೆ. ವಿದ್ಯಾರ್ಥಿಗಳು ಶಾಂತತೆಯನ್ನು ಅನುಭವಿಸಿದರು, ಸೆಷನ್‌ನ ನಂತರ ತುಂಬಾ ಉಲ್ಲಾಸಭರಿತರಾಗಿದ್ದರು.

– ಶ್ರೀ ಸಂತೋಷ ಕೋರೆ, ಕಾರ್ಯಕರ್ತ

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್; ಅನು: ವರ್ಷಾ ದೀಪಕ್**

ಮಾನಸಿ ಚೈತನ್ಯವಲಯದ ಆಧ್ಯಾತ್ಮಿಕ ವಾತಾವರಣದಲ್ಲಿ ತಪೋನಗರಿಗರ ಮುಂದಿನ ಜನಾಂಗವು ಸುಂದರವಾಗಿ ಬೆಳೆಯುತ್ತಿದೆ. ಧ್ಯಾನಿಗಳಿಗೆ ಹುಟ್ಟಿದುದರಿಂದ ಈ ಮಕ್ಕಳಿಗೆ ಆಧ್ಯಾತ್ಮಿಕ ವಿಚಾರಗಳನ್ನು ಮತ್ತು ಬೋಧನೆಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಂಪೂರ್ಣ ಅನುಕೂಲವಿದೆ. ಇಲ್ಲಿನ ಮೂರು ಮಕ್ಕಳು ಗೊಂಬೆಯಾಟಕ್ಕಾಗಿ ಒಂದು ಸಣ್ಣಕಥೆಯನ್ನು ಬರೆದು ತೋರಿಸಿದಾಗ ಇದು ಸ್ಪಷ್ಟವಾಯಿತು. ಓಂ–ಒಬ್ಬ ಪ್ರತಿಭಾವಂತ ಹುಡುಗ, ಅವನ ತಂಗಿ ಸ್ವಸ್ತಿಕಾ–ಕಲಾತ್ಮಕತೆಯ ಒಲವಿರುವ ಓರ್ವ ಜಾಣ ಹುಡುಗಿ, ಹಾಗೂ ಅವರ ಸ್ನೇಹಿತೆ ಉಪಾಸನ–ಶಾಸ್ತ್ರೀಯ ಸಂಗೀತದ ವಿದ್ಯಾರ್ಥಿನಿ, ಇವರೆಲ್ಲ ಸೇರಿ ಈ ಗೊಂಬೆಗಳಿಗೆ ಧ್ವನಿಯನ್ನು ಮತ್ತು ಹಿನ್ನೆಲೆಶಬ್ದವನ್ನು ನೀಡಿದರು. ಅವರು ಚೌಕಟ್ಟು, ಗೊಂಬೆಗಳು ಮತ್ತು ಕಥಾವಸ್ತುವನ್ನು ತಾವೇ ಸ್ವತ ವಿನ್ಯಾಸಗೊಳಿಸಿದ್ದರು.

ಗುರೂಜಿಯವರ ಹುಟ್ಟುಹಬ್ಬ ಮತ್ತು ತಾಯಂದಿರ ದಿನದ ಕಾರ್ಯಕ್ರಮಗಳೆರಡೂ, ಬೆಳಕಿನ ಶಕ್ತಿ ಮತ್ತು ಆತ್ಮಸ್ಥೈರ್ಯವನ್ನು ಕಂಡುಕೊಳ್ಳುವ ಒಂದು ಕಥೆಯಾಗಿ ಹೆಣೆದುಕೊಂಡವು. ತಪೋನಗರದಲ್ಲಿ, ಉಲ್ಲಸಿತ ಮಕ್ಕಳು ತಮ್ಮ ಆಟದ ಸಮಯವನ್ನು ಆನಂದಿಸುವುದರೊಂದಿಗೆ ಕಥೆಯು ಆರಂಭಗೊಂಡಿತು. ಜ್ವರವನ್ನು ಹರಡುವ ರಾಕ್ಷಸವೊಂದು ಈ ಎಲ್ಲಾ ಸಂತೋಷವನ್ನು ಹಾಳುಗೆಡುಹಲು ಯೋಜನೆಯನ್ನು ಹಾಕಿತ್ತು; ಇದು ಮಕ್ಕಳಲ್ಲಿ ಅನಾರೋಗ್ಯವನ್ನುಂಟುಮಾಡುತ್ತಿತ್ತು. ಆತಂಕಗೊಂಡ ತಾಯಂದಿರು ಪರಿಹಾರಕ್ಕಾಗಿ ಗುರೂಜಿಯವರ ಹತ್ತಿರ ಹೋದಾಗ ಅವರು ಬೆಳಕನ್ನು ಚಾನಲ್ ಮಾಡಿ ಮತ್ತು ನಿಮ್ಮ ಆತ್ಮಸ್ಥೈರ್ಯವನ್ನು ಬಳಸಿಕೊಳ್ಳಿ ಎಂದು ಮಾರ್ಗದರ್ಶನ ಮಾಡಿದರು. ತಾಯಂದಿರು ಈ ಸಲಹೆಯನ್ನು ಅನುಸರಿಸಿ, ಒಂದು ಬಲವಾದ ಶಕ್ತಿಯಾಗಿ ರೂಪುಗೊಂಡರು. ನಂತರದ ಯುದ್ಧದಲ್ಲಿ ಅವರು ಆ ರಾಕ್ಷಸವನ್ನು ಸೋಲಿಸಿದರು. ಗುರೂಜಿಯವರ ಕೃಪೆಯಿಂದ ಎಲ್ಲವೂ ಸುಖಾಂತ್ಯವಾಯಿತು. ಮಕ್ಕಳು ಕೊನೆಯಲ್ಲಿ ಸೊಗಸಾಗಿ ವಂದನಾರ್ಪಣೆ ಮಾಡಿದರಲ್ಲದೆ, ನೆರೆದವರಿಂದ ಮೂರು ನಿಮಿಷಗಳ ಕಾಲ ಲೈಟ್ ಚಾನಲ್ ಮಾಡಿಸಿದರು. ಇದಾದ ನಂತರ, ತಪೋನಗರದ ಕೋಗಿಲೆಯಾದ ಉಪಾಸನಾ ಒಂದು ಭಜನೆಯನ್ನು ಹಾಡಿ ವಾತಾವರಣದಲ್ಲಿ ಭಕ್ತಿಭಾವವನ್ನು ತುಂಬಿದಳು.

ಗುರೂಜಿಯವರ ಬೋಧನೆಗಳಲ್ಲಿ ಬೇರೂರಿರುವ ಈ ಎಳೆಯ ತಪೋನಗರಿಗರು, ಉಜ್ವಲ ಭವಿಷ್ಯದ ಭರವಸೆಯಾಗಿದ್ದಾರೆ. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

**ಸಂ: ಶೋಭಾ ಕೆ. ರಾವ್; ಅನು: ಸುಧಾಕರ್**

ಜನವರಿ 2005

ತಮ್ಮ ಕುಂಡಲಿನಿಯನ್ನು ಜಾಗ್ರತಗೊಳಿಸಬೇಕೆಂದು ಜನರು ಬಯಸಿದಾಗಲೆಲ್ಲಾ, 'ನೀವು ಇದನ್ನು ಏಕೆ ಬಯಸುತ್ತೀರಿ?' ಎಂದು ಅಮರರವರು ಅವರನ್ನು ಕೇಳುತ್ತಿದ್ದರು. ಸಹಜವಾಗಿ ಸಿದ್ಧಿ, ಮುಂತಾದವುಗಳನ್ನು ಪಡೆಯಲು ಜನರು ಅದನ್ನು ಬಯಸುತ್ತಾರೆ. ಆದರೆ, ಧ್ಯಾನದಿಂದ ನಮ್ಮನ್ನು ಶುದ್ಧೀಕರಿಸಿಕೊಳ್ಳುವುದಕ್ಕೆ ಮೊದಲು ಕುಂಡಲಿನಿಯನ್ನು ಜಾಗ್ರತಗೊಳಿಸುವುದು ಸೂಕ್ತವಲ್ಲವೆಂದು ಅಮರರವರು ಹೇಳುತ್ತಿದ್ದರು.

ಫೆಬ್ರವರಿ 2005

ಪ್ರತಿ ದಿನ ಸೂರ್ಯ ಉದಯಿಸಿದರೂ, ಪ್ರತಿಯೊಂದು ಸೂರ್ಯೋದಯವೂ ವಿಭಿನ್ನ. ಅದೇ ಮಗುವಿನ ಜೊತೆ ಪ್ರತಿ ದಿನ ಆಟವಾಡಿದರೂ, ಪ್ರತಿಬಾರಿ ಪಡುವ ಸಂತೋಷವೂ ವಿಭಿನ್ನ. ನಾವು ಧ್ಯಾನಮಾಡಿದ ಪ್ರತಿಬಾರಿಯೂ ಅನುಭವ ಭಿನ್ನವಾಗಿರುತ್ತದೆ. ನಾವು ಧ್ಯಾನವನ್ನು ಬಿಡಬಹುದು, ಮತ್ತೆ ಸೇರಬಹುದು, ಆದರೆ ಪ್ರತಿ ಬಾರಿ ಹಾಗೆ ಮಾಡಿದಾಗ, ನಾವು ಧ್ಯಾನದ ಬೇರೆ ಹಂತದಲ್ಲಿರುತ್ತೇವೆ. ಪ್ರತಿ ಅಮರಜಯಂತಿಯಂದು ನಾವೆಲ್ಲ ಸೇರುತ್ತೇವೆ, ಆದರೆ ಪ್ರತಿಯೊಂದು ಅಮರಜಯಂತಿಯೂ ಭಿನ್ನವಾಗಿರುತ್ತದೆ. ಹೊಸ ಚೈತನ್ಯಗಳಿರುತ್ತವೆ. ಹೊಸ ಅವಕಾಶಗಳಿರುತ್ತವೆ ಹಾಗೂ ಯಾವಾಗಲೂ ಹೆಚ್ಚಿನ ಸಂಖ್ಯೆಯ ಮತ್ತು ಹೊಸದಾಗಿ ಬಂದ ಸೂಕ್ಷ್ಮದೇಹಿಗಳು ನಿಮ್ಮ ಮಧ್ಯೆ ಕುಳಿತಿರುತ್ತಾರೆ ಮತ್ತು ಮಾಸ್ಟರ್‌ಗಳು ವೇದಿಕೆಯ ಮೇಲೆ ಆಸೀನರಾಗಿರುತ್ತಾರೆ. ಕಾರ್ಯಕ್ರಮವೂ ಅದೇ, ಗುರುವೂ ಅವರೇ ಆದರೆ ಪ್ರತಿ ಅಮರಜಯಂತಿಯೂ ಭಿನ್ನ. ಅಮರರವರು ಶಾಶ್ವತ ಪುರುಷ. ಅವರು ಎಂದೆಂದಿಗೂ ಜೀವಿಸಿರುತ್ತಾರೆ.

ನನ್ನ ಕೆಲಸವನ್ನು ನೆನಪುಮಾಡಿಕೊಳ್ಳುವುದಾದರೆ, ನಾನು ಮಾಡಿದ ಅತಿಮುಖ್ಯ ಕೆಲಸಗಳಲ್ಲೊಂದು ಅಮರರವರನ್ನು ನಿಮಗೆ ಪರಿಚಯಿಸಿದ್ದು. ಸಹಜವಾಗಿಯೆ ಅಮರರವರು ನನ್ನೊಳಗೆ ಜೀವಿಸಿದ್ದಾರೆ. ಅವರನ್ನು ಭೇಟಿಯಾದ, ಅವರೊಂದಿಗೆ ಬಾಳಿದ. ಅಮರರವರು ನಿಮ್ಮೊಳಗೂ ಜೀವಿಸಿದ್ದಾರೆ. ಅಮರರವರು ನಮ್ಮ ಜೀವನದ ಒಂದು ಭಾಗವಾಗಿರುವುದೊಂದು ಸಂತೋಷದ ವಿಷಯ. ಅವರು ನಮ್ಮ ಗುರು, ಪಿತೃ, ಸ್ನೇಹಿತ ಹಾಗೂ ಅವರೊಂದು ನೈತಿಕ ಬೆಂಬಲ. ಪ್ರಾಯಶಃ ಅವರೊಬ್ಬ ಅತಿ ಶ್ರೇಷ್ಠ ಸೂಕ್ಷ್ಮಯಾನ ಪ್ರಯಾಣಿಕ. ಸೂಕ್ಷ್ಮಮಟ್ಟದಲ್ಲಿ ಅವರು ಮಾಡಿದ ಕೆಲಸಗಳು ಅತ್ಯಾಶ್ಚರ್ಯವನ್ನುಂಟುಮಾಡುತ್ತವೆ. ಅವು ಬಹಿರಂಗಗೊಂಡಿಲ್ಲದಿರುವುದರಿಂದ ಅವುಗಳು ನಮ್ಮ ತಿಳುವಳಿಕೆಗೆ ಬಂದಿಲ್ಲದಿರಬಹುದು. ಅವರು ತುಂಬ ವಿನಯವಂತರು. ಅದು ಅವರ ವೈಶಿಷ್ಟ್ಯವಾಗಿತ್ತು. ಅವರಲ್ಲಿ ಅಪಾರವಾದ ತಾಳ್ಮೆಯಿತ್ತು. ಅವರು ಜನರ ಮಾತುಗಳನ್ನು ಸಂಪೂರ್ಣವಾಗಿ ಆಲಿಸುತ್ತಿದ್ದರು. ಅವರು ಏನನ್ನಾದರೂ ವಿವರಿಸಿದಾಗಲೆಲ್ಲಾ ಅದರಲ್ಲಿ ತಾಜಾತನವಿರುತಿತ್ತು. ಅವರ ಮಾತುಗಳ ಹಿಂದೆ ಹೆಚ್ಚಿನ ಶಕ್ತಿ ತುಂಬಿರುತ್ತಿತ್ತು ಏಕೆಂದರೆ ಸತ್ಯಕ್ಕೆ ಅದರದೇ ಆದ ಶಕ್ತಿಯಿದೆ. ಅವರು ಗೊಣಗಿದ್ದನ್ನು ನಾನೆಂದೂ ನೋಡಿಲ್ಲ. ಅವರು ಎಂದಿಗೂ ದೂರುತ್ತಿರಲಿಲ್ಲ. ಒಮ್ಮೆ ಅವರು ಸೇವಿಸುತ್ತಿದ್ದ ಆಹಾರದಲ್ಲಿ ಉಪ್ಪು ಹಾಕಿರಲಿಲ್ಲವಂತೆ, ನಂತರ ಅದು ಬೇರೆಯವರಿಗೆ ಅರಿವಾಯಿತು. ಬಹುತೇಕ ಎಲ್ಲವೂ ಸರಿಯಾಗಿದ್ದಾಗಲೂ ನಾವು ಗೊಣಗುತ್ತೇವೆ, ಆದರೆ ಅವರು ಎಂದಿಗೂ ಹಾಗೆ ಮಾಡುತ್ತಿರಲಿಲ್ಲ.

ಅವರೆಂದಿಗೂ ಯಾರನ್ನೂ ಅಪಹಾಸ್ಯ ಮಾಡುತ್ತಿರಲಿಲ್ಲ. ಆದರೆ ಅವರು ತಮಾಷೆ ಮಾಡುತ್ತಿದ್ದರು. ಸಣ್ಣ ಮಗುವನ್ನು ಕೂಡಾ ಅವರು ಗೌರವಿಸುತ್ತಿದ್ದರು. ಒಮ್ಮೆ ಇನ್ನೂ ಎಳೆಯ ಹುಡುಗನಾಗಿದ್ದ ನನ್ನ ಮಗನನ್ನು, 'ದಯವಿಟ್ಟು ಒಳಗೆ ಬನ್ನಿ ಸರ್' ಎಂದು ಅವರು ಎದ್ದು ನಿಂತು ಸ್ವಾಗತಿಸಿದಾಗ ನಾನು ದಿಗ್ಭ್ರಾಂತನಾಗಿದ್ದೆ. ಇದರ ಮೂಲಕ ಅವರು ನಮಗೆ ಏನನ್ನೋ ಕಲಿಸುತ್ತಿದ್ದರು. ಅವರಿಗೆ ಎಲ್ಲರೂ ಆತ್ಮೀಯರು. ಅವರು ಏನನ್ನೂ ಯಾರ ಮೇಲೂ ಬಲವಂತವಾಗಿ ಹೇರುತ್ತಿರಲಿಲ್ಲ. ಅವರು ಸತ್ಯವನ್ನಷ್ಟೇ ನಮ್ಮ ಮುಂದಿಡುತ್ತಾ ಹೋದರು; ಅವುಗಳನ್ನು ನಾವು ಒಪ್ಪಿಕೊಳ್ಳಬೇಕೆಂದು ಎಂದಿಗೂ ಒತ್ತಾಯ ಮಾಡಲಿಲ್ಲ. ಯಾವುದರ ಬಗ್ಗೆಯಾಗಲೀ, ನಮಗೆ ಅದನ್ನು ಮನಗಾಣಿಸುವ ಪ್ರಯತ್ನ ಮಾಡಲಿಲ್ಲ. ನಮಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟರು, ಅದು ನಮಗೆ ಬೆಳೆಯಲು ಸಹಾಯಕವಾಯಿತು. ಅವರ ಸಮ್ಮುಖದಲ್ಲಿ ಎಲ್ಲರಿಗೂ ಉತ್ಕರ್ಷಗೊಂಡ ಅನುಭವವಾಗುತ್ತಿತ್ತು. ಅವರು ಮಾತನಾಡುತ್ತಿರಲಿ ಅಥವಾ ಮೌನವಾಗಿ ಕುಳಿತಿರಲಿ, ಅಲ್ಲಿ ಇನ್ನೊಂದು ಮಟ್ಟದಲ್ಲಿನ ಒಂದು ಮೌನವಾದ ಸಹಭಾಗಿತ್ವವಿರುತ್ತಿತ್ತು. ಅವರು ಅಪಾರವಾದ ಜ್ಞಾನವನ್ನು ತಂದರು. ಆದರೆ ನಾವು ಅದನ್ನು ಪಡೆಯಲು ಇನ್ನೂ ಸಿದ್ಧಗೊಂಡಿಲ್ಲದಿರುವುದರಿಂದಾಗಿ ಎಲ್ಲವನ್ನೂ ತಿಳಿಸಲು ಸಾಧ್ಯವಾಗುತ್ತಿಲ್ಲವೆಂದು ಅವರು ಹೇಳಿದರು. ಆಧ್ಯಾತ್ಮಿಕ ಪ್ರಪಂಚಕ್ಕೆ ಅವರ ಕೊಡುಗೆ ಮಹತ್ತರವಾದುದು ಹಾಗೂ ಅಪೂರ್ವವಾದುದು. ಸೃಷ್ಟಿ, ನಮ್ಮ ಮೂಲ, ಆತ್ಮದ ಅವರೋಹಣಗಳ ಬಗೆಗಿನ ಜ್ಞಾನವನ್ನು ಅವರು ಕೊಟ್ಟರು ಮತ್ತು ಹುಟ್ಟು-ಸಾವುಗಳ ಬಗ್ಗೆ ವಿವರಿಸಿದರು. ಉಪನಿಷತ್ತುಗಳ ಸಾರಕ್ಕೆ ಹೆಚ್ಚು ಜ್ಞಾನವನ್ನು ಸೇರಿಸಿದರು, ಅದನ್ನು ಸರಳಗೊಳಿಸಿದರು ಮತ್ತು ಅದನ್ನು ನಮಗೆ ಕೊಡುಗೆಯಾಗಿ ನೀಡಿದರು ಎಂದು ನಾನು ಸದಾ ಹೇಳುತ್ತಿರುತ್ತೇನೆ. ಅವರು ಸೂಕ್ಷ್ಮದೇಹ, ಸೂಕ್ಷ್ಮಪ್ರಪಂಚ ಹಾಗೂ ಸೂಕ್ಷ್ಮಯಾನಗಳ ಜ್ಞಾನ ನೀಡಿದರು. ಅವರು ತಂತ್ರಗಳನ್ನು ಕೊಟ್ಟರು. ನಮ್ಮನ್ನು ಅನ್ಯಲೋಕಗಳಿಗೆ ಕರೆದೊಯ್ದರು. ಅವರ ಸೂಕ್ಷ್ಮಯಾನಗಳು ಅತ್ಯಾಶ್ಚರ್ಯಕರ! ಅವರು ನಮಗೆ ಸಪ್ತಋಷಿಗಳನ್ನು ಪರಿಚಯಿಸಿದರು. ನಾವು ಅಮರರವರನ್ನು ಭೇಟಿಮಾಡುವವರೆಗೂ ಋಷಿಗಳು ನಮಗೆ ಪುರಾಣದ ಪಾತ್ರಗಳಾಗಿದ್ದರು. ಎಲ್ಲಕ್ಕಿಂತ ಮಿಗಿಲಾಗಿ, ಅವರು ಋಷಿಗಳ ಸಂಪರ್ಕವನ್ನು ನಮಗೆ ಕಲ್ಪಿಸಿದರು. ಧ್ಯಾನದ ವಿಜ್ಞಾನವನ್ನು ಕೊಟ್ಟರು ಮತ್ತು 'ಅಧ್ಯಾತ್ಮಿಕತೆ' ಎಂದರೆ ಏನೆಂದು ತಿಳಿಸಿಕೊಟ್ಟರು.

'ಸನ್ಯಾಸ'ದ ಮೂಲಾರ್ಥವನ್ನು ತಿಳಿಸಿದರು. ಮಾಯೆಯನ್ನು ಯಾವಾಗಲೂ ನಕಾರಾತ್ಮಕ-ವಾದುದೆಂದು ಪರಿಗಣಿಸಲಾಗುತ್ತದೆ, ಆದರೆ ಮಾಯೆ ನಮಗೊಂದು ಕೊಡುಗೆ ಎಂದು ಅವರು ವಿವರಿಸಿದರು. ನೂರಾರು ವರ್ಷಗಳ ತಪ್ಪು ಮಾಹಿತಿಗಳನ್ನು ಹಾಗೂ ತಪ್ಪು ತಿಳುವಳಿಕೆಗಳನ್ನು ತೊಡೆದು ಹಾಕಿದರು. ಸತ್ಯಯುಗದ ಜ್ಞಾನದ ಮೊದಲ ಭಾಗವನ್ನು ನಮಗೆ ಕೊಟ್ಟರು. ಮೊದಲಿಗೆ ಇಲ್ಲಿಯ ಜೀವನವನ್ನು ಸಂಪೂರ್ಣವಾಗಿ ಜೀವಿಸಿ, ನಂತರ ಮುಕ್ತಿಯ ಬಗ್ಗೆ ಯೋಚಿಸಿ ಎಂದು ಉಪದೇಶಿಸಿದರು. ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಅತ್ಯಂತ ಪರಿಣಾಮಕಾರಿ ವಿಧಾನವನ್ನು ಹೇಳಿಕೊಟ್ಟರು. ನಮ್ಮ ಬಹುತೇಕ ಸಮಸ್ಯೆಗಳಿಗೆ ನಮ್ಮ ಕರ್ಮಗಳೇ ಕಾರಣವೆಂದು ತಿಳಿಸಿದರು. ನಾವು ಅವುಗಳನ್ನು ಮುಂದೂಡಬಹುದು ಅಥವಾ ನಾವು ಕರ್ಮಗಳನ್ನು ದಹಿಸುವ ಮೂಲಕ ಶಾಶ್ವತವಾಗಿ ನಿವಾರಿಸಬಹುದು. ಧ್ಯಾನ ಕರ್ಮಗಳನ್ನು ದಹಿಸುತ್ತದೆ ಎಂದು ಅವರು ಹೇಳಿದರು.

ನಮ್ಮಲ್ಲಿ ಅನೇಕರಿಗೆ ಸಮಸ್ಯೆಗಳಿವೆ. ನಾವು ಧ್ಯಾನ ಮಾಡಿದಾಗ, ಹೇಗೋ ವಿಸ್ಮಯವೆನ್ನಿಸುವಂತೆ ಸಮಸ್ಯೆಗಳು ಪರಿಹಾರವಾಗುತ್ತವೆ. ಆಧ್ಯಾತ್ಮಿಕ ಸಂಪತ್ತು ಲೌಕಿಕ ಸಂಪತ್ತಿಗಿಂತ ಹೆಚ್ಚು ಬೆಲೆಯುಳ್ಳದ್ದು ಎಂದು ಹೇಳಿದರು. ನಮ್ಮ ಚಟುವಟಿಕೆಗಳಿಗೆ ಸುಲಭವಾಗಿ ಆದ್ಯತೆ ನೀಡಬಹುದು. ಅವರು ಪ್ರೀತಿಯನ್ನು ಕಲಿಸಿದರು. ವೈರಾಗ್ಯವನ್ನು ಕಲಿಸಿದರು. 'ವೈರಾಗ್ಯವೆಂದರೆ ಪ್ರಪಂಚವನ್ನು ತಿರಸ್ಕರಿಸುವುದಲ್ಲ; ಪ್ರತಿಯೊಂದನ್ನೂ ವ್ಯಾಮೋಹರಹಿತರಾಗಿ ಪ್ರೀತಿಯಿಂದ ಮಾಡುವುದು' ಎಂದು ಹೇಳಿದರು. ಈ ಪ್ರಪಂಚದಲ್ಲಿ ನಡೆಯುತ್ತಿರುವ ಎಲ್ಲಾ ಆಧ್ಯಾತ್ಮಿಕ ಕೆಲಸಗಳೂ ಒಂದೇ ಕೆಲಸವಾಗಿದೆ, ಎಲ್ಲಾ ಕೆಲಸಗಳನ್ನೂ ಋಷಿಗಳು ಗಮನಿಸುತ್ತಿರುತ್ತಾರೆ ಎಂದು ಅವರು ಹೇಳಿದರು.

ಈಗಿನ ಕಾಲಕ್ಕೆ ಪ್ರಸ್ತುತವಾಗಿದ್ದುದು ಅಮರರವರ ಹಿರಿಮೆ. ಅವರು ಹೇಳಿದ್ದೆಲ್ಲವನ್ನು ಜೀವಿಸಿದರು. ಈ ಜೀವನದ ಹಿಂದೆ, ಸೃಷ್ಟಿಯ ಹಿಂದೆ ಮಹಾನ್ ಬುದ್ಧಿಶಕ್ತಿಯಾದ ದೇವರು ಇದ್ದಾನೆ ಎಂದು ಅವರು ಹೇಳಿದರು. ದೇವರನ್ನು ನಂಬುವುದಕ್ಕೆ ಅಥವಾ ಒಪ್ಪಿಕೊಳ್ಳುವುದಕ್ಕೆ ಎಂದೂ ಅವರು ಒತ್ತಾಯಿಸಲಿಲ್ಲ. "ಆಧ್ಯಾತ್ಮಿಕವಾಗಿ ಬಾಳಲು ನೀವು ಧ್ಯಾನ ಮಾಡಬೇಕಾಗಿಲ್ಲ, ಆದರೆ ಆಳವಾದ ಧ್ಯಾನದಲ್ಲಿ ನೀವು ದೇವರನ್ನು ಕಾಣುತ್ತೀರಿ" ಎಂದು ಹೇಳಿದರು. ನಾವು ಅದೃಷ್ಟವಂತರು, ಏಕೆಂದರೆ ಇಂತಹ ಮಾಸ್ಟರ್‌ಗಳು ಈ ಭೂಮಿಗೆ ಬರುವುದು ಅಪರೂಪ ಹಾಗೂ ಅವರ ಸಂಪರ್ಕಕ್ಕೆ ನಾವು ಬರುವುದೂ ಅಪರೂಪ.

ಅಮರರವರು ಕಲಿಸಿದ ನಿಯಮಗಳನ್ನು ಬಾಳುವುದರ ಮೂಲಕ ಅವರಿಗೆ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸೋಣ. ಅದು ಸುಲಭವಲ್ಲ. ನಾವು ಅದನ್ನು ಆಯ್ಕೆ ಮಾಡಿಕೊಂಡಿರುವುದು ಅರ್ಥಪೂರ್ಣವಾಗಿದೆ.

ದೈವವನ್ನು ನಾವು ಅಭಿವ್ಯಕ್ತಿಸಬೇಕು. ಅದು ತುಂಬ ಸರಳ. ಸದಾ ಕಾಲ ನಗುಮುಖದಿಂದಿರುವ ಮೂಲಕ ನಮ್ಮ ಕೃತಜ್ಞತೆಯನ್ನು ಅರ್ಪಿಸಬೇಕು. ಅದು ಎಲ್ಲರನ್ನೂ ವ್ಯಾಪಿಸುವಂತೆ ನಾವು ಮಾಡಬಹುದು. ನಾವು ಪ್ರೀತಿಯನ್ನು ಹರಡಬೇಕು. ಪ್ರತಿಯೊಂದು ಕ್ಷಣವೂ ಶಾಂತಿಯಿಂದಿರುವಂತೆ ಮಾಡಬೇಕು. ಅಮರರವರಿಗೆ ನಮ್ಮನ್ನು ಬದ್ಧರನ್ನಾಗಿಸಿಕೊಳ್ಳಬೇಕು. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

**2–6–2013**

ದೇವರ ಇರುವಿಕೆ ಯಾವಾಗಲೂ ಇದೆ ಎಂದು ಗುರೂಜಿಯವರು ಸುಂದರವಾಗಿ ವಿವರಿಸಿದ್ದಾರೆ. ನಮ್ಮ ಸುತ್ತಲೂ ಅದು ಇದೆ ಎನ್ನುವುದನ್ನು ನಮಗೆ ತೋರಿಸಿಕೊಡುವುದರಲ್ಲಿ ಅದು ವಿಫಲವಾಗುವುದಿಲ್ಲ. ಅನೇಕ ಸುಂದರ ವಿಧಾನಗಳಲ್ಲಿ ದೇವರು ತನ್ನನ್ನು ಪ್ರದರ್ಶಿಸಿಕೊಳ್ಳುತ್ತಾನೆ, ಉದಾಹರಣೆಗೆ ಕೋಗಿಲೆಯ ಹಾಡು. ನಮಗೆ ಇದರ ಅರಿವುಂಟಾದಾಗ ಮತ್ತು ಇವುಗಳನ್ನು ಗುರುತಿಸಿದಾಗ ನಮ್ಮಲ್ಲಿ ಪ್ರೇರಣೆ ಉಂಟಾಗುತ್ತದೆ ಮತ್ತು ಉತ್ಸಾಹ ತುಂಬುತ್ತದೆ. ಅತ್ಯುತ್ತಮ ಉದಾಹರಣೆಯೆಂದರೆ ಆಕಾಶ. ಅದು ಯಾವಾಗಲೂ ಇದೆ. ಅದನ್ನು ನೋಡಿದರೆ ಸಾಕು, ಪದಗಳಲ್ಲಿ ವರ್ಣಿಸಲಾಗದಂಥ ಒಂದು ರೀತಿಯ ಅನುಭವವಾಗುತ್ತದೆ. ನಾವು ಉಲ್ಲಾಸಗೊಳ್ಳುತ್ತೇವೆ.

ತಮ್ಮ ವೃತ್ತಿಯಲ್ಲಿ ಉನ್ನತ ಹುದ್ದೆಯನ್ನು ಹೊಂದಿರುವ ನಮ್ಮ ಇಬ್ಬರು ಸಾಧಕರಿಗೆ, ಇನ್ನೂ ಉನ್ನತ ಹುದ್ದೆಯ, ಆಕರ್ಷಕ ಆರ್ಥಿಕ ಸಹಾಯದ ಅವಕಾಶ ಒದಗಿಬಂದಿತ್ತು. ಆ ಅವಕಾಶಗಳನ್ನು, ಸಾಧನೆಯಲ್ಲಿ ಹೆಚ್ಚು ತೊಡಗಿಸಿಕೊಳ್ಳಲು ನಿರ್ಧರಿಸಿದ್ದ ಅವರಿಬ್ಬರೂ ತಿರಸ್ಕರಿಸಿದರು. ತಮ್ಮಲ್ಲಿರುವುದು ಸಾಕು, ಆಧ್ಯಾತ್ಮಿಕವಾಗಿ ಇನ್ನೂ ಉನ್ನತವಾದುದನ್ನು ಅರಸಬೇಕು ಎಂದು ಅವರಿಗನ್ನಿಸಿತು. 'ತೃಪ್ತಿಯ ಗೆರೆಗಳನ್ನು ಹಾಕಿ' ಎನ್ನುವ ಏಳನೆಯ ಶಂಬಲ ನಿಯಮದ ನೆನಪನ್ನು ಇದು ನನಗೆ ತರುತ್ತದೆ. ಇಂಥ ವಿಷಯಗಳನ್ನು ಗಮನಿಸುವುದು ಸಂತೋಷ ತರುತ್ತದೆ. ತೃಪ್ತಿಯ ಗೆರೆಗಳನ್ನು ಹಾಕಬಲ್ಲ ಇಂಥ ಜನರು ಒಂದು ಕಡೆ ಇದ್ದರೆ, ಇನ್ನೊಂದು ಕಡೆ ಕೋಟ್ಯಾಂತರ ಹಣವಿದ್ದರೂ ಇನ್ನೂ ಹೆಚ್ಚು ಅಧಿಕಾರ ಮತ್ತು ಹಣವನ್ನು ಬಯಸುವ ಜನರನ್ನು ನಾವು ಟೆಲಿವಿಜನ್‌ನಲ್ಲಿ ನೋಡುತ್ತೇವೆ.

ಋಷಿಗಳೊಂದಿಗಿರುವ ನಾವು ಅದೃಷ್ಟವಂತರು. ತೃಪ್ತಿಯ ಗೆರೆಗಳನ್ನು ಹಾಕಬೇಕೆಂಬುದರ ಅರ್ಥ ಅನುಕೂಲತೆಗಳೆಲ್ಲವನ್ನೂ ಬಿಡಬೇಕೆಂದಲ್ಲ. ಅದು, ನಮ್ಮಲ್ಲಿ ಸಾಕಷ್ಟಿದೆ ಎನ್ನುವುದನ್ನು ಅರಿತುಕೊಳ್ಳುವುದು ಹಾಗೂ ವ್ಯವಹಾರಿಕವಾಗಿ ಮತ್ತು ವಿವೇಚನೆಯಿಂದಿರುವುದು. ಇದು ನಮಗೆ ಸಾಧ್ಯವಾದರೆ ನಮ್ಮಲ್ಲಿ ಎಷ್ಟೊಂದು ನೆಮ್ಮದಿ ಇರುತ್ತದೆ. ವಿವೇಚನೆಯಿಂದಿರುವುದೆಂದರೆ ಆಧ್ಯಾತ್ಮಿಕರಾಗಿರುವುದು ಎಂದು ಗುರೂಜಿಯವರು ಹೇಳಿದ್ದರು.

ನಾವು ಧ್ಯಾನಮಾಡಿದಾಗ, ಆಂತರಿಕವಾಗಿ ದೇವರನ್ನು ನಿರಾಕಾರ ರೂಪದಲ್ಲಿ ಅನುಭವಿಸುತ್ತೇವೆ. ನಾವು ಧ್ಯಾನದಿಂದ ಹೊರಬಂದಾಗ, ಸೃಷ್ಟಿಯ ಪ್ರತಿಯೊಂದರಲ್ಲೂ ದೇವರನ್ನು ಅನುಭವಿಸಲು ನಮಗೆ ಸಾಧ್ಯವಾದರೆ, ನಾವು ನೋಡುವುದೆಲ್ಲವೂ ಅವನ ಅಭಿವ್ಯಕ್ತಿ ಎಂದು ಕಾಣಲು ಸಾಧ್ಯವಾದರೆ, ಅದೇ ಯೋಗ. ಗುರೂಜಿಯವರು ಇದರ ವಿವರಣೆಯನ್ನು ಮುಂದುವರಿಸುತ್ತಾ, 'ಲೌಕಿಕ ಜೀವನವನ್ನು ಪರಿಪೂರ್ಣವಾಗಿ ಬಾಳುವುದು ಕೂಡ ಯೋಗ. ಪ್ರತಿಯೊಂದು ಚಟುವಟಿಕೆಯಲ್ಲಿನ ಪರಿಪೂರ್ಣತೆಯೂ ಯೋಗ' ಎಂದು ಅತಿ ಸುಂದರವಾಗಿ ಹೇಳಿದ್ದಾರೆ. ಅದು ಕಷ್ಟ, ಆದರೆ ಸಾಧ್ಯ. ಹಾಗಿಲ್ಲದಿದ್ದರೆ ಋಷಿಗಳು ಅದರ ಬಗ್ಗೆ ಹೇಳುತ್ತಿರಲಿಲ್ಲ. ನಮ್ಮ ಈಗಿನ ಆಧ್ಯಾತ್ಮಿಕ ಸ್ಥಿತಿಯನ್ನು ನೋಡಿ ನಾವು ನಿರಾಶರಾಗಬೇಕಾಗಿಲ್ಲ ಮತ್ತು ನಾವು ಸಾಧಿಸಹೊರಟಿರುವುದರ ಅಗಾಧತೆಯಿಂದ ವಿಚಲಿತರಾಗಬೇಕಾಗಿಲ್ಲ. ನಾವು ಸಾಧಕರು, ಯಾವಾಗಲೂ ಋಷಿಗಳು ನಾವು ಮಾಡುತ್ತಿರುವ ಪ್ರಯತ್ನವನ್ನು ನೋಡುತ್ತಾರೆ, ನಮ್ಮ ಸಾಧನೆಯ ಹಂತವನ್ನಲ್ಲ. ಆದ್ದರಿಂದ ಸರಿಯಾದ ದಿಕ್ಕಿನಲ್ಲಿ ಪ್ರಯತ್ನ ಮಾಡುವುದಷ್ಟೇ ನಮ್ಮಿಂದ ನಿರೀಕ್ಷಿಸಲಾಗುತ್ತದೆ.

**23–3–2014**

ಗುರೂಜಿಯವರಿಗೆ ಋಷಿಗಳೊಂದಿಗಿದ್ದಂಥ ಸಂಪರ್ಕವನ್ನು ನಮಗೆ ಸಾಧಿಸಲು ಸಾಧ್ಯವಾದರೆ, ಅನೇಕವನ್ನು ಒಳಗೊಂಡಿರುವ ತಪೋನಗರದ ಕಟ್ಟಡಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಅದು ಸಹಾಯ ಮಾಡುತ್ತದೆ. ಲಭ್ಯವಿರುವ ಜ್ಞಾನವನ್ನು ಬಳಸಿಕೊಳ್ಳುವುದು, ಹೆಚ್ಚು ಸಾಧನೆ ಮಾಡಿ ಋಷಿಯಾಗುವ ಕಡೆಗೆ ಅಥವ ಹೊಸಯುಗದ ಪ್ರಜೆಯಾಗುವ ಕಡೆಗೆ ಸಾಗುವುದಷ್ಟೇ ನಾವು ಮಾಡಲು ಸಾಧ್ಯ. ನಾವು ಬೆಳೆಯುತ್ತಾ ಹೋದಂತೆಲ್ಲಾ ಇನ್ನೂ ಹೆಚ್ಚು ಪಡೆಯುತ್ತೇವೆ. ಅದರ ಪೂರ್ಣ ನಂಬಿಕೆ ನನಗಿದೆ.

**27–4–2014**

'ಮಾತು ಕಡಿಮೆ ಮಾಡಿ, ಹರಟೆಯನ್ನು ತಪ್ಪಿಸಿ', ಎಂದು ಗುರೂಜಿಯವರು ಹೇಳುತ್ತಿದ್ದರು. ಸ್ವಾಮಿ ವಿವೇಕಾನಂದರ ಮತ್ತೊಂದು ಹೇಳಿಕೆ ನನ್ನ ಗಮನಕ್ಕೆ ಬಂತು. 'ಏಕಾಂತದಲ್ಲಿ ಬೇರೆಯವರ ಬಗ್ಗೆ ಕೆಟ್ಟದಾಗಿ ಮಾತನಾಡುವುದು ಪಾಪ ಎಂಬುದನ್ನು ತಿಳಿಯಿರಿ. ಅದನ್ನು ಸಂಪೂರ್ಣವಾಗಿ ತಪ್ಪಿಸಿ' ಎಂದು ಅವರು ಹೇಳುತ್ತಾರೆ. ಈ ನಿಯಮವನ್ನು ನಾವು ಗಂಭೀರವಾಗಿ ಪರಿಗಣಿಸಿದರೆ, ಅದನ್ನು ಆಚರಿಸುವುದು ಕಷ್ಟವೇನಲ್ಲ ಎನ್ನುವುದು ನನ್ನ ಅನಿಸಿಕೆ. ಹರಟೆಯನ್ನು ನಾವು ಆನಂದಿಸುತ್ತೇವೆ. ಬೇರೆಯವರಲ್ಲಿನ ಒಳ್ಳೆಯ ಭಾಗಗಳನ್ನು ಗುರುತಿಸುವುದು ಮತ್ತು ಅವರಲ್ಲಿನ ಸಕಾರಾತ್ಮಕ ವಿಷಯಗಳನ್ನು ಮೆಚ್ಚುವುದು ನಮಗೆ ಇನ್ನೂ ಹೆಚ್ಚಿನ ಸಂತೋಷವನ್ನು ತರುತ್ತದೆ ಎಂದು ನನಗನ್ನಿಸುತ್ತದೆ. ನಾನು ಅದನ್ನು ಅನುಭವಿಸಿರುವುದರಿಂದಾಗಿ ಹಾಗೆ ಹೇಳಬಲ್ಲೆ. ಈ ರೀತಿಯಲ್ಲಿ ನಮ್ಮ ಮೂಲಕ ದೈವತ್ವವು ಪ್ರಕಟಗೊಂಡಾಗ ನಮಗೆ ವಿಸ್ತಾರಗೊಂಡ ಅನುಭವವಾಗುತ್ತದೆ. ಉನ್ನತಗೊಂಡ ಅನುಭವ ನಮಗಾಗುತ್ತದೆ. ಆದರೆ ನಕಾರಾತ್ಮಕತೆ ನಮ್ಮ ಮೂಲಕ ಅಭಿವ್ಯಕ್ತಗೊಂಡರೆ ನಮಗೆ ಸೀಮಿತಗೊಂಡ ಮತ್ತು ಅಸಂತೋಷಗೊಂಡ ಅನುಭವವಾಗುತ್ತದೆ.

ಮತ್ತೊಂದು ನಿಯಮವನ್ನು ತೆಗೆದುಕೊಳ್ಳೋಣ – ವಿನಯವಂತಿಕೆ. ವಿನಯವಂತಿಕೆಯನ್ನು ಬೆಳೆಸಿಕೊಳ್ಳುವುದು ಆಧ್ಯಾತ್ಮಿಕವಾಗಿ ಬೆಳೆಯುವುದಕ್ಕೆ ಸಮಾನವೆಂದು ನಾವು ನಿಜವಾಗಿಯೂ ಒಪ್ಪಿಕೊಳ್ಳುವುದಾದರೆ, ಅದನ್ನು ಆಚರಿಸುವುದು ಕಷ್ಟವೇನಲ್ಲವೆಂದು ನಾನು ಭಾವಿಸುತ್ತೇನೆ. 'ಆಧ್ಯಾತ್ಮಿಕವಾಗಿ ಬೆಳೆಯಬೇಕೆನ್ನುವ ಬಯಕೆ ನಮಗೆ ನಿಜವಾಗಿಯೂ ಇದೆಯೇ? ಅದು ನಮ್ಮ ನಿಜವಾದ ಗುರಿಯಾಗಿದೆಯೇ? ಅದಕ್ಕಾಗಿಯೇ ನಾವಿಲ್ಲಿದ್ದೇವೆಯೇ?' ಎಂಬ ಪ್ರಶ್ನೆಗಳನ್ನು ನಮಗೆ ನಾವೇ ಕೇಳಿಕೊಳ್ಳಬೇಕು. ಇಂತಹ ಪ್ರಶ್ನೆಗಳನ್ನು ಕೇಳಿಕೊಳ್ಳುವಾಗ ನಾವು ಪ್ರಾಮಾಣಿಕರಾಗಿರಬೇಕು ಮತ್ತು ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಬೇಕು. ಅದು ನಮ್ಮ ಗುರಿಯಾಗಿಲ್ಲದಿದ್ದರೆ, ಪ್ರಾಯಶಃ ನಾವು ಈ ಮಾರ್ಗದಲ್ಲಿ ನಮ್ಮ ಸಮಯವನ್ನು ವ್ಯರ್ಥಮಾಡುತ್ತಿದ್ದೇವೆ. ನಾವು ಒಂದು ಬಾರಿಗೆ ಒಂದು ನಿಯಮವನ್ನು ಆರಿಸಿಕೊಂಡು ಅಭ್ಯಾಸ ಮಾಡಬಹುದು, ನಮ್ಮ ಅಭ್ಯಾಸವನ್ನು ಉತ್ತಮಗೊಳಿಸಿಕೊಳ್ಳುತ್ತಾ ಹೋಗಬಹುದು; ಕ್ರಮೇಣ ಬೇರೆ ಎಲ್ಲಾ ನಿಯಮಗಳನ್ನೂ ಅಭ್ಯಾಸಮಾಡಲು ಪ್ರಾರಂಭಿಸಿರುವುದರ ಅರಿವು ನಮಗಾಗುತ್ತದೆ.

'ನನ್ನ ನಿರೀಕ್ಷೆಯ ಮಟ್ಟಕ್ಕೆ ನಾನು ಬೆಳೆಯಲು ಈ ಎಲ್ಲ ಜ್ಞಾನ ಮತ್ತು ಈ ಎಲ್ಲ ಚೈತನ್ಯಗಳು ಏಕೆ ಸಹಾಯಮಾಡುತ್ತಿಲ್ಲ?' ಎಂಬಂತಹ ಪ್ರಶ್ನೆಗಳನ್ನು ಆಗಾಗ ಕೇಳಿಕೊಳ್ಳುವುದು ನಮಗೆ ಮುಖ್ಯವಾಗುತ್ತದೆ. ನಮಗಿರುವ ಅವಕಾಶಗಳನ್ನು ನಾವು ಉಪಯೋಗಿಸಿಕೊಳ್ಳಲು ಪ್ರಾರಂಭಿಸಿದರೆ, ನಮ್ಮಲ್ಲಿ ಸ್ಥಿತ್ಯಂತರಗಳುಂಟಾಗುತ್ತಿರುವುದನ್ನು, ಬೆಳವಣಿಗೆಯುಂಟಾಗುತ್ತಿರುವುದನ್ನು ನಾವು ಗಮನಿಸಬಹುದು.

ಎರಡು ಪಕ್ಷಗಳಿದ್ದು, ಅದರಲ್ಲಿ ಒಂದು ಸಂಪೂರ್ಣವಾಗಿ ಸರಿ ಹಾಗೂ ಮತ್ತೊಂದು ಸಂಪೂರ್ಣವಾಗಿ ಸರಿಯಿಲ್ಲದಿರುವ ಸನ್ನಿವೇಶವನ್ನು ನಿಭಾಯಿಸುವುದು ಸುಲಭ. ಯಾವ ವ್ಯಕ್ತಿ ಸರಿಯಿದ್ದಾನೋ ಅವನ ಪರ ವಹಿಸಿಕೊಳ್ಳಬೇಕೆನ್ನುವುದು ನಮಗೆ ತಿಳಿದಿದೆ. ಆದರೆ ಎರಡೂ ಪಕ್ಷಗಳು ಸರಿಯಿಲ್ಲದಿದ್ದಾಗ ಅಥವ ಎರಡೂ ಪಕ್ಷಗಳು ಭಾಗಶಃ ಸರಿಯಿದ್ದು ಭಾಗಶಃ ಸರಿಯಿಲ್ಲದಿದ್ದಾಗ, ಅಂಥ ಸನ್ನಿವೇಶವನ್ನು ನಿಭಾಯಿಸುವುದು ಕಷ್ಟ. ಸದ್ಯದಲ್ಲಿ ನಮ್ಮ ಪ್ರಪಂಚ ಈ ಸಮಸ್ಯೆಯನ್ನು ಎದುರಿಸುತ್ತಿದೆಯೆಂದು ನನಗನ್ನಿಸುತ್ತದೆ. ಉನ್ನತ ಶಕ್ತಿಗಳು ಯಾರ ಪರ ವಹಿಸುತ್ತವೆ? ಋಷಿಗಳು, ದೇವರು ಯಾರ ಪರ ವಹಿಸುತ್ತಾರೆ? ಈ ಭೂಮಿಯ ಮೇಲಿನ ಆಗುಹೋಗುಗಳನ್ನು ಅವರು ಗಮನಿಸುತ್ತಿದ್ದಾರೆ. ಅವರು ನಮಗೆ ಸಹಾಯ ಮಾಡಬಯಸುತ್ತಾರೆ. ಅದರಿಂದಾಗಿಯೇ, ಬೆಳಕನ್ನು ಆಯ್ಕೆಮಾಡಿಕೊಳ್ಳುವುದರ ಬಗ್ಗೆ ಅವರು ಅಷ್ಟೊಂದು ಹೇಳುತ್ತಿರಬಹುದು. ಆಯ್ಕೆಯ ಬಗ್ಗೆ ಗುರೂಜಿಯವರು ಬಹಳಷ್ಟು ಮಾತನಾಡಿದ್ದಾರೆ – ಬೆಳಕನ್ನು ಆಯ್ಕೆ ಮಾಡಿಕೊಳ್ಳುವುದು ಮತ್ತು ಆಯ್ಕೆ ಮಾಡಿಕೊಳ್ಳುವುದರ ಮಹತ್ವ. 'ಆಯ್ಕೆ ಮಾಡಿಕೊಳ್ಳಿ, ಅಷ್ಟು ಸಾಕು' ಎಂದು ಅವರು ಹೇಳಿದರು. ನೀವು ಆಯ್ಕೆ ಮಾಡಿದಾಗ ಬೆಳಕಿನ ಕಡೆಗೆ ಬರುತ್ತೀರಿ. ಬಹುತೇಕ ಜನ ಬೆಳಕಿನ ಕಡೆಗೆ ಬಂದಾಗ, ಬೆಳಕಿಗೆ ಶ್ರುತಿಗೊಳ್ಳುವುದನ್ನು ಆಯ್ಕೆಮಾಡಿಕೊಂಡಾಗ, ನಮಗಾಗಿ ಹೊಸಯುಗವನ್ನು ಕೆಳತರುವುದು ಋಷಿಗಳಿಗೆ ಸುಲಭವಾಗುತ್ತದೆ. ಅಲ್ಲಿಯವರೆಗೆ ನಾವು ಬೆಳೆಯಬಹುದು, ಹೆಚ್ಚು ಬೆಳಕನ್ನು ಚಾನಲ್ ಮಾಡಬಹುದು ಮತ್ತು ಕಾಯಬೇಕು. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ್ಲೀಯು ರೂ. 4500. ಈ ಫ್ಲೀನಲ್ಲಿ 14% ಸೇವಾ ತೆರಿಗೆ, ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀಯು ರೂ. 3500. ಈ ಫ್ಲೀನಲ್ಲಿ 14% ಸೇವಾ ತೆರಿಗೆ ಮತ್ತು ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಶ್ರೀ ರಾಘವೇಂದ್ರ ಸೋಮಯಾಜಿಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

ನನ್ನ ಅಭಿಪ್ರಾಯದಲ್ಲಿ, ದೇವರ ಕೃಪೆಯನ್ನು ನಾವು ಗಳಿಸಲಾಗುವುದಿಲ್ಲ. ಅದು ಯಾವಾಗಲೂ ಇರುತ್ತದೆ. ಅದು ಮುಗಿಯುವುದಿಲ್ಲ. ಪ್ರತಿಯೊಬ್ಬರೂ ಕೃಪೆಗೆ ಅರ್ಹರು. ದೇವರಿಗೆ ನಮ್ಮ ಮೇಲಿರುವ ಪ್ರೀತಿಯಿಂದ ಕೃಪೆ ಬರುತ್ತದೆಂದು ಗುರೂಜಿಯವರು ಹೇಳಿದ್ದರು. ದೇವರು ಎಲ್ಲರನ್ನೂ ಪ್ರೀತಿಸುತ್ತಾನೆ, ಆದ್ದರಿಂದ ಎಲ್ಲರೂ ದೇವರ ಕೃಪೆಯನ್ನು ಪಡೆಯುತ್ತಾರೆ. ನಾವು ಅವನನ್ನು ನಂಬುತ್ತೇವೆಯೋ ಅಥವ ಇಲ್ಲವೋ, ನಾವು ಅವನನ್ನು ಪ್ರೀತಿಸುತ್ತೇವೆಯೋ ಅಥವ ಇಲ್ಲವೋ, ಅದನ್ನು ಗಮನಿಸದೆ ದೇವರು ನಮ್ಮನ್ನು ಪ್ರೀತಿಸುತ್ತಾನೆ.

ದೇವರ ಸರ್ವವ್ಯಾಪಿತ್ವ ಮತ್ತು ಅವನ ಶರತ್ತುರಹಿತ ಪ್ರೀತಿಯಂತೆಯೇ ಕೃಪೆಯು ಒಂದು ಸಂಪೂರ್ಣ ಸತ್ಯ ಮತ್ತು ಅದು ನಿರಪೇಕ್ಷ ವಲಯದಿಂದ (absolute realm) ಬರುತ್ತದೆ, ಆದರೆ 'ಒಳ್ಳೆಯ ಅದೃಷ್ಟ' ದ್ವಂದ್ವಗಳಿರುವ ಈ ಸಾಪೇಕ್ಷ ವಲಯದಲ್ಲಿ (relative realm) ಮಾತ್ರ ಅಸ್ತಿತ್ವದಲ್ಲಿದೆ. ಸಾಪೇಕ್ಷ ವಲಯದಲ್ಲಿ ಪ್ರತಿಯೊಂದೂ ಮಿತಿಯುಳ್ಳದ್ದು ಹಾಗೂ ಸೀಮಿತವಾದುದು. ಆದ್ದರಿಂದ ಒಳ್ಳೆಯ ಅದೃಷ್ಟವೂ ಸೀಮಿತವಾದುದು. ಕೃಪೆಯು ಪರಿಪೂರ್ಣ ಸತ್ಯವಾದುದರಿಂದ ಅದಕ್ಕೆ ವಿರುದ್ಧವಾದುದು ಇಲ್ಲ ಮತ್ತು ಅದರಲ್ಲಿ ಹೆಚ್ಚು ಕೃಪೆ ಅಥವ ಕಡಿಮೆ ಕೃಪೆ ಅನ್ನುವುದು ಇಲ್ಲ. ಕೃಪೆಯು ಯಾವಾಗಲೂ ಇದೆ ಮತ್ತು ಅದು ಮಿತಿಯಿಲ್ಲದ್ದು.

ದೇವರು ತಮ್ಮನ್ನು ಪ್ರೀತಿಸುವುದಿಲ್ಲ, ಆದ್ದರಿಂದ ಅವನ ಕೃಪೆಯನ್ನು ತಾವು ಪಡೆಯುತ್ತಿಲ್ಲ ಎಂದು ನಂಬಿರುವ ಅನೇಕ ಜನರು, ಮುಖ್ಯವಾಗಿ ಕಷ್ಟಪಡುತ್ತಿರುವ ಜನರು, ಈ ಭೂಮಿಯ ಮೇಲಿದ್ದಾರೆ. ಒಳ್ಳೆಯ ಕರ್ಮವನ್ನು ನಾವು ಪ್ರಯತ್ನ ಮಾಡಿ ಗಳಿಸಬೇಕು, ಆದರೆ ಕೃಪೆಗೆ ಯಾವುದೇ ಪ್ರಯತ್ನ ಬೇಕಾಗಿಲ್ಲ. ಒಬ್ಬ ವ್ಯಕ್ತಿಯ ಕಷ್ಟಗಳ ಹಿಂದಿರುವ ಎಲ್ಲ ಕಾರಣಗಳನ್ನೂ ನಮಗೆ ಅರ್ಥಮಾಡಿಕೊಳ್ಳಲು ಆಗುವುದಿಲ್ಲ, ಆದರೆ ಆ ಕಷ್ಟಕ್ಕೆ ಕೃಪೆಯ ಕೊರತೆಯಂತೂ ಖಂಡಿತವಾಗಿ ಕಾರಣವಲ್ಲ.

ಅರಿವಿನಿಂದ ಅಥವ ಅರಿವಿಲ್ಲದೆ ನಾವು ಮಾಡುವ ಎಲ್ಲ ತಪ್ಪು ಆಯ್ಕೆಗಳೂ ದೇವರ ಕೃಪೆಯನ್ನು ನಮ್ಮಿಂದ ದೂರ ಇಡುತ್ತವೆ. ದೇವರು ನಮ್ಮನ್ನು ಪ್ರೀತಿಸುವುದಿಲ್ಲ ಎಂದು ನಾವು ನಂಬಿದರೆ, ದೇವರ ಪ್ರೀತಿಗೆ ನಾವು ಯೋಗ್ಯರಲ್ಲವೆಂದು ನಮ್ಮ ಬಗ್ಗೆ ನಾವೇ ತೀರ್ಮಾನಿಸಿಕೊಳ್ಳುತ್ತೇವೆ ಮತ್ತು ದೇವರ ಕೃಪೆಗೆ ನಾವು ಅರ್ಹರಲ್ಲವೆಂದು ನಂಬಲು ಪ್ರಾರಂಭಿಸುತ್ತೇವೆ. ಇಂಥ ದೃಢ ನಂಬಿಕೆಯ ಜೊತೆಗೆ ಯೋಗ್ಯರಲ್ಲವೆಂಬ ಭಾವನೆಯಿದ್ದಾಗ ಅದು ಕೃಪೆಯನ್ನು ಪಡೆಯದಂತೆ ಮಾಡುತ್ತದೆ. ಈ ಕಾರಣದಿಂದಾಗಿಯೇ ನಮ್ಮನ್ನು ನಾವು ಪ್ರೀತಿಸುವುದು ಮತ್ತು ಕ್ಷಮಿಸುವುದು ತುಂಬ ಮುಖ್ಯವಾಗುತ್ತದೆ. ಹೀಗೆ ಮಾಡಲು ನಮಗೆ ಸಾಧ್ಯವಾದರೆ, ಕೃಪೆಯ ಪ್ರವಾಹದ್ವಾರಗಳೇ ನಮಗೆ ತೆರೆದುಕೊಳ್ಳುತ್ತವೆ. ಅಲ್ಲದಿದ್ದರೆ, ವಿಶ್ವಕ್ಕೆ ನಮ್ಮನ್ನು ಪ್ರೀತಿಸಲಾಗುವುದಿಲ್ಲ, ಏಕೆಂದರೆ ನಾವೇ ವಿಶ್ವ.

ನಾವು ಈಗಾಗಲೇ ಪಡೆದಿರುವ ಎಲ್ಲದಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸುವ ಮೂಲಕ ದೇವರ ಕೃಪೆಯನ್ನು ಪಡೆದುಕೊಳ್ಳುವುದು, ಅತಿ ಮುಖ್ಯವಾದ ಮತ್ತು ಪರಿಣಾಮಕಾರಿಯಾದ ಒಂದು ಮಾರ್ಗ. ಈಗಾಗಲೇ ಇರುವ ಕೃಪೆಯ ಅರಿವಿಲ್ಲದಿರುವುದು, ಹಣವಂತನೊಬ್ಬನು ತಾನು ಬಡವನೆಂದು ನಂಬಿದಹಾಗೆ. ಪ್ರಕೃತಿಯಲ್ಲಿನ ಎಲ್ಲ ಸೌಂದರ್ಯ, ಸಂಗೀತ, ಸೂರ್ಯಾಸ್ತಮ, ಹೂವುಗಳು ಮತ್ತು ಪಕ್ಷಿಗಳೆಲ್ಲವೂ ಕೃಪೆಯ ಅಭಿವ್ಯಕ್ತಿಯೇ ಆಗಿವೆ. ಅವುಗಳನ್ನು ನಾವು ಗುರುತಿಸದಿದ್ದರೆ, ಅವುಗಳನ್ನು ಪೂರ್ಣವಾಗಿ ಕಳೆದುಕೊಳ್ಳುತ್ತೇವೆ. ಅದು, ಅವುಗಳಾವುವೂ ನಮಗಿಲ್ಲದ ಹಾಗೆ.

ಕೃತಜ್ಞತೆಯನ್ನು ವ್ಯಕ್ತಪಡಿಸುವುದು ಸಕಾರಾತ್ಮಕತೆಯ ಒಂದು ಬಹುಮುಖ್ಯ ಭಾಗ. ಪ್ರತಿ ಕ್ಷಣವೂ ದೇವರ ಕೃಪೆಯನ್ನು ಗುರುತಿಸುವುದು ಪರಿಪೂರ್ಣ ಜೀವನದ ಅತ್ಯಾವಶ್ಯಕ ಭಾಗ. ಇದು ಹೆಚ್ಚು ಕೃತಜ್ಞತೆಗೆ ದಾರಿಮಾಡುತ್ತದೆ; ಹಾಗೆ ಮಾಡಿದಾಗ ಅದು ಇನ್ನೂ ಹೆಚ್ಚು ಕೃಪೆಗೆ ದಾರಿಮಾಡುತ್ತದೆ, ಅಂತಿಮವಾಗಿ ಅದು ಸಮೃದ್ಧಿಯೆಡೆಗೆ ಕರೆದೊಯ್ಯುತ್ತದೆ. ಸಮೃದ್ಧಿಯೆಂದರೆ ನಮ್ಮ ಅವಶ್ಯಕತೆಗಳಿಗೆ ಸಾಕಾಗುವಷ್ಟನ್ನು ಹೊಂದಿರುವುದು. ವೈರಾಗ್ಯವು ನಿಜವಾದ ಸಮೃದ್ಧಿಯ ಒಂದು ಭಾಗ. ಕೃತಜ್ಞತೆಯನ್ನು ವ್ಯಕ್ತಪಡಿಸುವುದಕ್ಕೆ ಅಹಂ ಅಡ್ಡಬರುತ್ತದೆ, ಇದರ ಪರಿಣಾಮವಾಗಿ ಕೃಪೆಯು ನಮ್ಮನ್ನು ತಲುಪದಂತೆ ಮಾಡುತ್ತದೆ.

ಏನನ್ನಾದರೂ ಪಡೆಯುವ ಸರಳ ವಿಧಾನವೆಂದರೆ, ಶರತ್ತುರಹಿತವಾಗಿ ಅದನ್ನು ಬೇರೆಯವರಿಗೆ ಕೊಡುವುದು. ಲೈಟ್ ಚಾನಲಿಂಗ್ ಸಂದರ್ಭದಲ್ಲಿ ಇದನ್ನಾಗಲೇ ನಾವು ತಿಳಿದಿದ್ದೇವೆ.

ಕೃಪೆಯನ್ನು ಪಡೆಯುವ ಮತ್ತೊಂದು ವಿಧಾನವೆಂದರೆ, ಆಧ್ಯಾತ್ಮಿಕವಾಗಿ ಪರಿವರ್ತನೆ ಹೊಂದುವುದು. ನಾವು ಗಂಭೀರವಾದ ತಪ್ಪುಗಳನ್ನು ಮಾಡಿದಾಗ ಕರ್ಮಗಳನ್ನು ಆಕರ್ಷಿಸುತ್ತೇವೆಂದು ಗುರೂಜಿಯವರು ತಿಳಿಸಿದ್ದರು. ಆಳವಾದ ಮತ್ತು ಪ್ರಾಮಾಣಿಕ ಪಶ್ಚಾತ್ತಾಪವು ಕರ್ಮಗಳನ್ನು ಕಳೆಯುತ್ತದೆ ಮತ್ತು ನಮ್ಮನ್ನು ಪರಿವರ್ತಿಸುತ್ತದೆ. ನಾವು ಪರಿವರ್ತನೆಗೊಂಡಾಗ ದೈವದೊಂದಿಗೆ ಶ್ರುತಿ–ಗೊಳ್ಳುತ್ತೇವೆ ಹಾಗೂ ಕೃಪೆಯು ಅದಾಗಿಯೇ ಹರಿದುಬರುತ್ತದೆ.

ದೇವರ ಕೃಪೆಯಂತೆಯೇ ಗುರುವಿನ ಕೃಪೆಯೂ ಶರತ್ತುರಹಿತವಾಗಿದ್ದು, ಎಂದೆಂದಿಗೂ ಹರಿದುಬರುತ್ತಿರುತ್ತದೆ. ಅತ್ಯುನ್ನತ ಆಧ್ಯಾತ್ಮಿಕ ಸ್ಥಿತಿಯನ್ನು ತಲುಪಲು ನಮಗೆ ಗುರುವಿನ ಕೃಪೆ ಬೇಕು, ಆದರೆ ಅದನ್ನು ಪಡೆಯಲು ನಮಗೆ ಸಾಧ್ಯವೆ ಅಥವ ಇಲ್ಲವೆ ಎನ್ನುವುದು ನಮ್ಮನ್ನವಲಂಬಿಸಿದೆ.

ನಮ್ಮ ಅಹಂಅನ್ನು ನಿಜವಾಗಿಯೂ ಸಮರ್ಪಿಸಿದರೆ, ಕೃಪೆಯು ಪೂರ್ಣಪ್ರಮಾಣದಲ್ಲಿ ಹರಿದುಬರುತ್ತದೆಂದು ಗುರೂಜಿಯವರು ಹೇಳಿದ್ದರು. ನಾವು ತೆಗೆದುಕೊಳ್ಳುವ ಪ್ರತಿಯೊಂದು ಉಸಿರೂ ದೇವರ ಕೃಪೆಯೆಂದು ನಾವು ಅರಿತಾಗ, ನಮ್ಮ ಸಾಧನೆ ಕೊನೆಗೊಳ್ಳುತ್ತದೆಯೆಂದು ಕೂಡ ಗುರೂಜಿಯವರು ಹೇಳಿದ್ದರು. ■

# ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ.ರಾವ್; ಅನು: ಪಾಂಡುರಂಗ

**ಪ್ರ: ಋಷಿಗಳ ಜೊತೆ ಸಂಪರ್ಕಗೊಳ್ಳುವ ಅಭ್ಯಾಸ ಮಾಡುತ್ತಿರುವಾಗ, ನಾವು ಕೆಲವು ಮಾಹಿತಿಗಳನ್ನು ಪಡೆದರೆ, ಆ ಸಮಯದಲ್ಲಿನಾವು ನಿಶ್ಚಲತೆಯನ್ನು ಅನುಭವಿಸುತ್ತೇವೆಯೇ?**

ಉ: ಇಲ್ಲ. ವಾಸ್ತವದಲ್ಲಿ ಅದು ಅಭಿಮುಖವಾಗಿದೆ. ನಾವು ನಿಶ್ಚಲತೆಯನ್ನು ಅನುಭವಿಸುತ್ತಿರುವಾಗಲೇ ನಮಗೆ ಜ್ಞಾನವನ್ನಾಗಲೀ ಅಥವಾ ಮಾಹಿತಿ–ಯನ್ನಾಗಲೀ ಪಡೆಯಲು ಸಾಧ್ಯ.

**ಪ್ರ: ಮನೋಕಲ್ಪಿತ ಅನುಭವದ ಸಮಯದಲ್ಲಿ ನಮಗೆ ನಿಶ್ಚಲತೆಯ ಅನುಭವ ಆಗುತ್ತದೆಯೇ?**

ಉ: ಇಲ್ಲ.

**ಪ್ರ: ಮನೋಕಲ್ಪಿತ ವಿಷನ್‌ಗಳ ಸಂದರ್ಭದಲ್ಲಿ ಚೈತನ್ಯಗಳು ಬಿಡುಗಡೆಯಾಗುತ್ತವೆಯೇ?**

ಉ: ಇಲ್ಲ.

**ಪ್ರ: ಆಧ್ಯಾತ್ಮಿಕವಾಗಿ ಮುಂದುವರಿದ ಆತ್ಮಗಳು ಎಂದರೇನು?**

ಉ: ಕೆಳಗೆ ಬಂದ ಆತ್ಮಗಳು, ಹೆಚ್ಚಿನ ಜ್ಞಾನವನ್ನು ಸಂಪಾದಿಸಿದಾಗ, ಹೆಚ್ಚಿನ ವಿವೇಕವನ್ನು ಗಳಿಸಿಕೊಂಡಾಗ ಮತ್ತು ಹೆಚ್ಚಿನ ಪ್ರೀತಿಯನ್ನು ಅಭಿವ್ಯಕ್ತಗೊಳಿಸಲು ಶಕ್ತವಾದಾಗ ನಾವು ಆ ಆತ್ಮಗಳನ್ನು ಆಧ್ಯಾತ್ಮಿಕವಾಗಿ ಮುಂದುವರಿದ ಆತ್ಮಗಳೆಂದು ಗುರುತಿಸುತ್ತೇವೆ.

**ಪ್ರ: ನಮ್ಮ ಆತ್ಮಗಳಿಗೂ ಮತ್ತು ಮಾಷ್ಟರ್‌ಗಳ ಆತ್ಮಗಳಿಗೂ ಇರುವ ವ್ಯತ್ಯಾಸವೇನು?**

ಉ: ಅಗಾಧ ವ್ಯತ್ಯಾಸವಿದೆ. ಮಾಷ್ಟರ್‌ಗಳು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಅತ್ಯುನ್ನತವಾದುದನ್ನು ಸಾಧಿಸಿರುತ್ತಾರೆ. ಅವರು ಅಪಾರ ಜ್ಞಾನ ಮತ್ತು ಶಕ್ತಿಗಳನ್ನು ಪಡೆದಿರುತ್ತಾರೆ. ಅವರು ದೇವರಿಗೆ ಶರಣಾಗತರಾಗಿರುತ್ತಾರೆ. ಮತ್ತು ಅವರಿಗೆ ಯಾವುದೇ ರೀತಿಯ ವೈಯಕ್ತಿಕ ಅಜೆಂಡಾಗಳು ಇರುವುದಿಲ್ಲ. ಅವರು ತಮ್ಮ ಮೂಲಕ್ಕೆ ಹಿಂದಿರುಗಿ ಹೋಗುವುದಿಲ್ಲ, ಯಾವಾಗಲೂ ದೇವರ ಸೇವೆ ಮಾಡಲು ಇಲ್ಲಿಯೇ ಉಳಿಯುತ್ತಾರೆ.

**ಪ್ರ: ಆತ್ಮವು ಮೊದಲೇ ವಿಕಾಸಗೊಂಡಿರುವುದಿಲ್ಲವೇ?**

ಉ: ಆತ್ಮ ದೇವರ ಒಂದು ಭಾಗವೇ ಆಗಿದೆ. ಅದು ವಿಕಾಸಗೊಂಡಿರುತ್ತದೆ. ಆತ್ಮ ಕೆಳಗೆ ಬರುವಾಗ, ಅದು ಬುದ್ಧಿ, ಮನಸ್ಸು, ಮತ್ತು ದೇಹವನ್ನು ಪಡೆದುಕೊಳ್ಳುತ್ತದೆ. ಇವು ಮಿತಿಯನ್ನೊಡ್ಡುತ್ತವೆ. ನೀವು ಈ ಎಲ್ಲ ಇತಿಮಿತಿಗಳೊಂದಿಗೆ ಕೆಳಗೆ ಬಂದಾಗ ನಿಮ್ಮ ಇಚ್ಛಾ ಸ್ವಾತಂತ್ರ್ಯವನ್ನು ಬಳಸಲು ಆರಂಭಿಸುತ್ತೀರಿ. ಆಗ ಅನೇಕ ಘಟನೆಗಳು ಜರುಗುತ್ತವೆ. ನೀವು ಅನುಭವದ ಅನೇಕ ಸ್ಥಿತಿಗಳನ್ನು ಅನುಭವಿಸುತ್ತೀರಿ.

**ಪ್ರ: ಆಧ್ಯಾತ್ಮಿಕ ಪ್ರಗತಿಗಾಗಿ, ಈ ಸೃಷ್ಟಿಗೆ ಬಂದು ಪ್ರಯತ್ನಗಳನ್ನು ಮಾಡುವುದು ಅನಿವಾರ್ಯವೇ?**

ಉ: ನಾವು ಕೆಳಗೆ ಬರುವುದು, ಕಲಿಯುವುದಕ್ಕಾಗಿ ಅಲ್ಲ, ಆಧ್ಯಾತ್ಮಿಕ ಪ್ರಗತಿಗಾಗಿ ಕೂಡಾ ಅಲ್ಲ, ಆದರೆ ಅನುಭವಿಸುವುದಕ್ಕಾಗಿ. ನಾವು ದೇವರೊಂದಿಗಿದ್ದಾಗ ನಾವು ಅತ್ಯಂತ ಪ್ರಗತಿ ಹೊಂದಿದ ಆತ್ಮಗಳಾಗಿರುತ್ತೇವೆ.

**ಪ್ರ: ಋಷಿಯೊಬ್ಬರು ಪರಬ್ರಹ್ಮ ಲೋಕಕ್ಕೆ ಹಿಂದಿರುಗಿದಾಗ, ಅವರು ಅಲ್ಲಿಯ ಆತ್ಮಗಳಿಗಿಂತ ಹೆಚ್ಚಿನ ಪ್ರಗತಿ ಹೊಂದಿದವರಾಗಿರುತ್ತಾರೆಯೇ?**

ಉ: ಅಲ್ಲಿಯ ಆತ್ಮಗಳ ಆಧ್ಯಾತ್ಮಿಕ ಸ್ಥಿತಿಯ ಬಗ್ಗೆ ನಮಗೆ ಗೊತ್ತಿಲ್ಲ. ಅವರು ದೇವರ ಭಾಗವಾಗಿದ್ದಾರೆ. ಅವರೇ ದೇವರು. ಆದರೆ ಯಾರು ಇಲ್ಲಿಗೆ ಬರುತ್ತಾರೋ ಅವರು ಹೊಸ ಅನುಭವಗಳ ಸಂಪತ್ತಿನೊಂದಿಗೆ ಹಿಂದಿರುಗುತ್ತಾರೆ. ಅದೇ ವ್ಯತ್ಯಾಸ.

**ಪ್ರ: ಲೈಟ್ ಚಾನಲಿಂಗ್ ಅಭ್ಯಾಸ ಮಾಡುವುದರಿಂದ, ನಾವು ನಮ್ಮ ಸುತ್ತಲೂ ಬೆಳಕಿನ ವೃತ್ತವನ್ನು ನಿರ್ಮಿಸಿಕೊಳ್ಳುತ್ತೇವೆಯೇ?**

ಉ: ಇಲ್ಲ. ಕ್ರಾಂತಿಯೊಂದನ್ನುಂಟು ಮಾಡುವುದಕ್ಕಾಗಿ, ಹಿಂಸೆ ಮತ್ತು ಭ್ರಷ್ಟಾಚಾರವನ್ನು ತಡೆ–ಯುವುದಕ್ಕಾಗಿ, ನಮ್ಮೊಳಗೆ ಮತ್ತು ಹೊರಗೆ ಹೊಸ ಯುಗದ ಸ್ಥಾಪನೆಗಾಗಿ ಮತ್ತು ಅನೇಕ ಬೇರೆ ಉದ್ದೇಶಗಳಿಗಾಗಿ ನಾವು ಲೈಟ್ ಚಾನಲಿಂಗ್ ಮಾಡುತ್ತೇವೆ. ನಮ್ಮ ಸುತ್ತಲೂ ಬೆಳಕಿನ ವೃತ್ತವನ್ನು ನಿರ್ಮಿಸಿಕೊಳ್ಳುವುದಕ್ಕಾಗಿ ಅಲ್ಲ.

**ಪ್ರ: ನಾವು ಪರಿಪೂರ್ಣರೆಂದು ನಮಗನ್ನಿಸುವುದು ಯಾವಾಗ?**

ಉ: ನಮ್ಮ ಬಗ್ಗೆ ಮತ್ತು ಸೃಷ್ಟಿಯ ಬಗ್ಗೆ ನಿಜವಾದ ಜ್ಞಾನವನ್ನು ನಾವು ಹೊಂದಿದಾಗ ಪರಿಪೂರ್ಣತೆಯ ಅನುಭವವಾಗುತ್ತದೆ. ನಮ್ಮ ಗುರುವನ್ನು ಭೇಟಿಯಾದಾಗ ನಾವು ಪರಿಪೂರ್ಣರೆಂದೆನಿಸುತ್ತದೆ. ನಿಜವಾದ ಗುರುವಾದ ದೇವರನ್ನು ಭೇಟಿಯಾದಾಗ ನಾವು ಪರಿಪೂರ್ಣರೆಂದೆನಿಸುತ್ತದೆ. ಜ್ಞಾನ ಮತ್ತು ಅನುಭವ ನಮ್ಮನ್ನು ಪರಿಪೂರ್ಣರನ್ನಾಗಿ ಮಾಡುತ್ತವೆ. ನಾವು ನಿಶ್ಚಲತೆ, ಪ್ರೀತಿ ಮತ್ತು ಬೆಳಕಿನ ಬಗ್ಗೆ ತಿಳಿದುಕೊಂಡು ಅವುಗಳ ಅನುಭವಗಳನ್ನು ಪಡೆದಾಗ ನಾವು ಪರಿಪೂರ್ಣರೆಂದು ನಮಗನ್ನಿಸುತ್ತದೆ.

**ಪ್ರ: ದೇವರು ಪ್ರತಿಯೊಬ್ಬರನ್ನೂ ಸಮಾನವಾಗಿ ಪ್ರೀತಿಸುವನೇ?**

ಉ: ಹೌದು. ದೇವರು ಪ್ರತಿಯೊಬ್ಬರನ್ನೂ ಸರಿಸಮಾನವಾಗಿ ಪ್ರೀತಿಸುತ್ತಾನೆ. ಆದರೆ ಯಾರು ದೇವರ ಕೆಲಸವನ್ನು ಮಾಡುತ್ತಾರೋ, ಸಹಜವಾಗಿಯೇ ಅವರನ್ನು ದೇವರು ಹೆಚ್ಚು ಪ್ರೀತಿಸುತ್ತಾನೆ.

**ಪ್ರ: ಪ್ರೀತಿಯಿಂದಾಚೆ ಏನಾದರೂ ಇದೆಯೇ?**

ಉ: ಹೌದು. ಅದು 'ತ್ಯಾಗ' ಎಂದು ಋಷಿಗಳು ಹೇಳುತ್ತಾರೆ. ದೈವೀ ಪ್ರೀತಿಯಲ್ಲಿ ಯಾವ ಬೇಡಿಕೆಗಳಿರುವುದಿಲ್ಲ, ಯಾವ ಷರತ್ತು–ಗಳಿರುವುದಿಲ್ಲ. ದೈವೀ ಪ್ರೀತಿಯ ಅತ್ಯುನ್ನತ ಅಭಿವ್ಯಕ್ತಿಯೆಂದರೆ ತ್ಯಾಗ.


**ಪ್ರ: ಹೊಸ ಯುಗದಲ್ಲಿ ದಿನಚರಿ ಹೇಗಿರುತ್ತದೆ?**

ಉ: ನಾವು ಊಹಿಸಬಹುದು ಆದರೆ ನಾವಿನ್ನೂ ಪೂರ್ಣವಾಗಿ ತಿಳಿದುಕೊಳ್ಳಬೇಕಾಗಿದೆ. ಅಂದಿನ ಜೀವನದ ಬಗ್ಗೆ ನಾವು ಏನನ್ನೂ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

RNI. No. KARKAN/2003/13739 Registered Postal Regn. No. KRNA/BGE-1124/2014-2016
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

# ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಮಾನಸದಿಂದ ಹೊಸದಾಗಿ ಪ್ರಕಟಿಸಿರುವ "Master Pupil Talks – Volume II" ಪುಸ್ತಕವನ್ನು ನಾವು ಓದಿದೆವು. ಪ್ರತಿಸಲ ಅಂತಹ ಪುಸ್ತಕಗಳನ್ನು ಓದಿದಾಗಲೂ, ಅಮರಾಜೀ ಹಾಗೂ ಗುರೂಜಿಯವರಿಬ್ಬರೂ ನಮಗೆ ಇನ್ನೂ ಹತ್ತಿರವಾದಂತೆನಿಸುತ್ತದೆ ಎಂದು ಹೇಳಲು ನಮಗೆ ಸಂತೋಷವಾಗುತ್ತದೆ. ಈಗ ನಮಗೆ ಈ ಸಪ್ತಋಷಿಗಳ ಮಾರ್ಗವಲ್ಲದೆ ಬೇರೆ ಯಾವ ಮಾರ್ಗದ ಅವಶ್ಯಕತೆಯಿಲ್ಲವೆಂದು ಮನದಟ್ಟಾಗಿದೆ.

– ಯಾಸುಜಿ ಮತ್ತು ಇಕುಕೋ ಯಮಾಗೂಚಿ

ಇತ್ತೀಚೆಗೆ, ಒಂದು ದಿನ ಧ್ಯಾನದ ನಂತರ ನಾನು ಜಗನ್ಮಾತೆಯ ಬೃಹತ್ತಾದ ಆಕಾರವನ್ನು ಕಂಡೆ. ನಾನು ಒಂದು ಚಿಕ್ಕ ಮಗುವಿನಂತೆ ಅವಳ ತೊಡೆಯ ಮೇಲೆ ಇದ್ದೆ. ಸ್ವಲ್ಪ ಸಮಯದ ನಂತರ ಇಡೀ ವಿಶ್ವವೇ ಅವಳ ಕೈಯಲ್ಲಿ ಒಂದು ಗೋಳದಂತೆ ಇರುವುದನ್ನು ಕಂಡೆ. ಅವಳು ನನ್ನನ್ನು ಹಾಗೂ ಇಡೀ ವಿಶ್ವವನ್ನು ರಕ್ಷಿಸುತ್ತಿರುವಳೆಂದೆನಿಸಿತು.

– ಆಶಾ ರಾಕೇಶ್

ನನಗೆ ಈಗ ಬೆಳಕಿನಲ್ಲಿ ಹೆಚ್ಚಿನ ನಂಬಿಕೆಯುಂಟಾಗಿ, ಬಹಳ ಪ್ರಶಾಂತಳಾಗಿರುತ್ತೇನೆ. ಎಂತಹ ಸಂದರ್ಭದಲ್ಲೂ ಬೆಳಕು ನನ್ನನ್ನು ಕಾಪಾಡುತ್ತದೆ ಎಂಬುದು ಅರ್ಥವಾಗಿದೆ. ನಾನು ಬೆಳಕಿನೊಂದಿಗೆ ಮಾತನಾಡುತ್ತೇನೆ ಮತ್ತು ಉತ್ತರಕ್ಕಾಗಿ ಕಾಯುತ್ತೇನೆ.

– ಪ್ರತಿಭಾ ಪಟೇಲ್

ಒಂದು ಸಲ ನಾನು ದೇವಸ್ಥಾನದಲ್ಲಿ ಧ್ಯಾನ ಮಾಡುತ್ತಿದ್ದಾಗ, ನನ್ನ ತಲೆ ಮತ್ತು ಇಡೀ ದೇಹದಲ್ಲಿ ಬಲವಾದ ಕಂಪನಗಳ ಅನುಭವವಾಯಿತು. ಧ್ಯಾನದ ನಂತರ ನಾನು ಚೈತನ್ಯದ ಚಿಲುಮೆಯಲ್ಲಿ ಮಿಂದಂತೆನಿಸಿ ಸಂಪೂರ್ಣ ವಿಶ್ರಾಂತಿಯನ್ನು ಅನುಭವಿಸಿದೆ.

– ವಸಂತ ರಾಮಾನುಜನ್

ಒಂದು ಹೆದ್ದಾರಿಯ ಮೂಲಕ ನಾನು ಮತ್ತು ನನ್ನ ಯಜಮಾನರು ಒಂದು ರಾತ್ರಿ ಹಿಂತಿರುಗುತ್ತಿದ್ದೆವು. ಸಾಮಾನ್ಯವಾಗಿ ಪ್ರಯಾಣದಲ್ಲಿ ನಾನು ನಿದ್ರಿಸುತ್ತೇನೆ. ಆದರೆ ಆ ದಿನ ನನಗೆ ಒಳಗಿನಿಂದ ನೀನು ನಿದ್ರಿಸಬೇಡವೆಂಬ ಸೂಚನೆ ಬಂದು ನಿದ್ರಿಸಲಿಲ್ಲ. ಪ್ರಯಾಣದ ಮಧ್ಯದಲ್ಲಿ ಮುಂದೆ ಚಲಿಸುತ್ತಿದ್ದ ವಾಹನಗಳು ಇದ್ದಕ್ಕಿದ್ದಂತೆ ನಿಂತದ್ದನ್ನು ನನ್ನ ಯಜಮಾನರು ಗಮನಿಸಲಿಲ್ಲ. ನಾನು ಎಚ್ಚರವಾಗಿದ್ದುದರಿಂದ ಕಾರು ನಿಲ್ಲಿಸುವಂತೆ ಅವರಿಗೆ ಹೇಳಲು ಸಾಧ್ಯವಾಯಿತು, ಅವರು ಸಮಯಕ್ಕೆ ಸರಿಯಾಗಿ ವಾಹನವನ್ನು ನಿಲ್ಲಿಸಿದರು, ಮುಂದಾಗಬಹುದಾಗಿದ್ದ ಅಪಘಾತ ತಪ್ಪಿತು. ಬೆಳಕಿನ ಮಾರ್ಗದರ್ಶನದಲ್ಲಿರುವ ನಾವೇ ಭಾಗ್ಯವಂತರು.

– ಶಾಲ್ಮಲಿ ತಲ್ವಾಲ್ಕರ್

ಬೆಳಕನ್ನು ಅನುಭವಿಸುವುದರಿಂದ ನನ್ನ ಜೀವನದ ಅನೇಕ ಕಠಿಣ ಸನ್ನಿವೇಶಗಳನ್ನು ಸುಲಭವಾಗಿ ಪರಿಹರಿಸಲು ಸಾಧ್ಯವಾಗಿದೆ. ನನ್ನ ಹಾಗೂ ನನ್ನ ಸಂಸಾರವನ್ನು ಯಾವಾಗಲೂ ಕಾಪಾಡುತ್ತಿರುವ ಋಷಿಗಳು ಹಾಗೂ ಗುರೂಜಿಯವರಿಗೆ ಹೃತ್ಪೂರ್ವಕವಾದ ಧನ್ಯವಾದಗಳು.

– ರಶ್ಮಿ ರಘುವಂಶಿ

ನನ್ನಲ್ಲಾದ ಬದಲಾವಣೆಗಳನ್ನು ಅಳೆಯಲು ನನ್ನಿಂದ ಸಾಧ್ಯವಿಲ್ಲ. ಅನೇಕ ಸಂದರ್ಭಗಳಲ್ಲಿ ನಾನು ಶಾಂತತೆಯನ್ನು ಅನುಭವಿಸಿದ್ದೇನೆ. ನನ್ನ ಹತಾಶೆ, ಕೋಪ ಮತ್ತು ಚಡಪಡಿಕೆಗಳನ್ನು ನಿರಾಯಾಸವಾಗಿ ನಿರ್ವಹಿಸಿ ಕ್ಷಣಮಾತ್ರದಲ್ಲಿ ಅವನ್ನು ಹತೋಟಿಗೆ ತರುವುದನ್ನು ಗಮನಿಸಲು ಈಗ ಸಾಧ್ಯವಾಗಿದೆ. ಅನೇಕ ಸಲ ನನಗೆ ಮೌನದ ಇರವಿನಿಂದ ಅಪಾರ ಸಹಾಯ ದೊರೆತು, ಎಲ್ಲಾ ಘಟನೆಗಳೂ ನನ್ನ ಪರವೇ ಇರುವಂತೆ ಕೆಲಸಮಾಡುತ್ತದೆ.

– ರಾಜಲಕ್ಷ್ಮಿ ಆರ್.

ಅನೇಕ ಸಲ ನನ್ನ ಪ್ರಾರ್ಥನೆಗಳಿಗೆ ಉತ್ತರ ದೊರೆತು, ನನ್ನ ಯೋಚನೆಗಳಲ್ಲಿ ಸ್ಪಷ್ಟತೆ ಉಂಟಾಗುತ್ತದೆ. ನನ್ನಲ್ಲೀಗ ಕೃತಜ್ಞತಾಭಾವ ತುಂಬಿದೆ ಹಾಗೂ ಪ್ರಕೃತಿಯ ಸಂಪನ್ನತೆಯನ್ನು ಯಾವಾಗಲೂ ಅನುಭವಿಸುತ್ತೇನೆ.

ಇ–ಮೇಲ್ ಮೂಲಕ ಅಂತರ್ಜಾಲದಲ್ಲಿ ಮನೆಮನೆಗೂ ಈ ಅನುಭವಗಳನ್ನು ತಲುಪಿಸಿ ಶಾಂತಿ ನೆಲೆಸಲು ಸಹಕರಿಸಿದವರೆಲ್ಲರಿಗೂ ನಾನು ಅತ್ಯಂತ ಆಭಾರಿಯಾಗಿದ್ದೇನೆ.

– ಕುಸುಮ್ ನರೇನ್

ಇತ್ತೀಚಿನ ಒಂದು ಭಾನುವಾರ, ಕುಂಡಲಿನಿ ಹಾಲ್‌ನಲ್ಲಿ ಬೆಳಕಿನ ಸಂಚಲನವನ್ನು ಮಾಡುತ್ತಿದ್ದಾಗ, ಇದ್ದಕ್ಕಿದ್ದಂತೆ ಆ ಕೊಠಡಿಯು ಪ್ರಕಾಶಮಾನವಾದ ಬಿಳಿಯ ಬೆಳಕಿನಿಂದ ತುಂಬಿಹೋಯಿತು. ಅಲ್ಲಿ ನಾನು ಮೂರು ಫೋಟೋಗಳನ್ನು ನೋಡಿದೆ. ಅದರಲ್ಲಿ ಒಂದು ಗುರೂಜಿಯವರದು, ಇನ್ನೊಂದು ಕುರ್ಚಿಯ ಮೇಲೆ ಕುಳಿತಿದ್ದ ಅಮರಾಜಿಯವರದು ಮತ್ತು ಮೂರನೆಯದನ್ನು ನನಗೆ ಗುರುತಿಸಲಾಗಲಿಲ್ಲ. ಆ ಫೋಟೋಗಳ ಮುಂದೆ ಎರಡು ಹೂವಿನ ಹಾರಗಳಿಂದ ಅಲಂಕೃತಗೊಂಡಿದ್ದ ಕೆಂಪುಮಿಶ್ರಿತ ಕಂದು ಬಣ್ಣದ ದೊಡ್ಡ ಗಣೇಶನ ವಿಗ್ರಹ ಇತ್ತು. ಕಣ್ತೆರೆದು ಮತ್ತೆ ಮುಚ್ಚಿದಾಗಲೂ ಆ ಅನುಭವ ಮುಂದುವರೆಯಿತು! ನಂತರ ನಾನು ಅತ್ಯಂತ ಸಂತೋಷ ಮತ್ತು ಶಾಂತಿಯನ್ನು ಅನುಭವಿಸಿದೆ.

– ಸ್ವರ್ಣಲತಾ

ಇತ್ತೀಚೆಗೆ ನಾನು ಧ್ಯಾನ ಮಾಡುತ್ತಿದ್ದಾಗ, ತನ್ನ ದೈವೀ ಅಸ್ತಿತ್ವದೊಳಕ್ಕೆ ನನ್ನನ್ನು ಸೆಳೆದುಕೊಳ್ಳುವಂತೆ ಬೆಳಕನ್ನು ಪ್ರಾರ್ಥಿಸಿದೆ. ಆಗ ಕೆಲವು ನಿಮಿಷಗಳವರೆಗೆ ನಾನು ಮೇಲ್ಮುಖವಾಗಿ ತೇಲಾಡುತ್ತಿರುವಂತೆನಿಸಿತು. ಆ ಅನುಭವದ ನಂತರ ನಾನು ಅತ್ಯಂತ ಚೈತನ್ಯಶೀಲಳಾಗಿದ್ದೆ.

– ಹಂಸಾ ವೆಂಕಟರಾಮನ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ